

# ಸಿಹಿ ಕಹಿ

ಸಂಪಾದಕರು : ಮಾರುತಿ ಹೊಸಮನಿ
Editor : MARUTI BASAVANTAPPA HOSAMANI
Cell : +91 97413 19119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SK NEWS ಕನ್ನಡ

SIHI KAHI
KANNADA DAILY MORNING
BAGALKOT

Volume : 06 Issue : 197 Sunday 24-12-2023 E-mail : maruti.b.hosamani76@gmail.com Page: 4 Price : Rs. 1/-


## ಕಾಂಗ್ರೆಸ್ ಪಕ್ಷದ ಪ.ಜಾತಿ ವಿಭಾಗದ ಜಿಲ್ಲಾ ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ. ಯ. ಮಡ್ಡಿಮನಿ ಆಯ್ಕೆ






ವಿಜಯಪುರ : ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ. ಜಾತಿ ವಿಭಾಗದ ರಾಜ್ಯಾಧ್ಯಕ್ಷರಾದ ಶ್ರೀ ಆರ್.ಧರ್ಮಸೇನಾರವರ ನಿರ್ದೇಶನದ ಮೇರೆಗೆ ಕ.ಪ್ರ. ಕಾಂ.ಸ. (ಪ.ಜಾತಿ) ವಿಭಾಗದ ಜಿಲ್ಲಾ ಅಧ್ಯಕ್ಷರಾದ ಶ್ರೀ ರಮೇಶ. ಕಾ.ಗುಬ್ಬೇವಾಡ ಇವರು ಸರ್ವ ಸದಸ್ಯರ ಬಹುಮತದ ಅನುಮತಿ ಪಡೆದುಮಲ್ಲಿಕಾರ್ಜುನ. ಯಲ್ಲಪ್ಪ. ಮಡ್ಡಿಮನಿ ಸಾ.ಅಗರಖೇಡ ಇವರನ್ನು ವಿಜಯಪುರ ಜಿಲ್ಲಾ ಕಾಂಗ್ರೆಸ್ ಪಕ್ಷದ ಪ.ಜಾತಿ ವಿಭಾಗದ ಜಿಲ್ಲಾ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.ಈ ನೇಮಕ ಆದೇಶದಲ್ಲಿ ಕೂಡಲೇ ಅಧಿಕಾರ ವಹಿಸಿಕೊಂಡು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗ ದರ್ಶನದಲ್ಲಿ ತಮ್ಮ ಸ್ಥಳೀಯ ನಾಯಕರ ಸಹಯೋಗದಲ್ಲಿ ಪಕ್ಷ ಸಂಘಟನೆ ಹಾಗೂ ಬಲವರ್ಧನೆಗೆ ಕಾರ್ಯೋನ್ಮುಖರಾಗ ಬೇಕೆಂದು ಸೂಚಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಎಸ್.ಸಿ.ಮೋರ್ಚಾ ಉಪಾಧ್ಯಕ್ಷರಾದ ಶ್ರೀ ಶಿವಾನಂದ ಮೂರಮನ.ಶ್ರೀ ನಂದು ಚವ್ಹಾಣ.ಶ್ರೀ ಕೃಷ್ಣ ರಾಠೋಡ.ಶ್ರೀ ವಸಂತ ಹೊನಮೋಡೆ. ಶ್ರೀ ಯುವರಾಜ ಭಜಂತ್ರಿ.ಶ್ರೀ ಪ್ರಿಯಾಂಕಾ ತೊರವಿ.ಹಾಗೂ ಆರತಿ ಹೊಸಮನಿ.ಇತರೆ ಕಾಂಗ್ರೆಸ್ ಹಿರಿಯ ಕಾರ್ಯಕರ್ತರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು : ಶಿವಪ್ಪ.ಬಿ.ಹರಿಜನ. ಇಂಡಿ**

## ರಾಷ್ಟ್ರ ಮಟ್ಟದ ಅಂಬೇಡ್ಕರ್ ಫೆಲೋಷಿಫ್ ಪ್ರಶಸ್ತಿ ಪುರಸ್ಕೃತರಾದ ರಾಜ್ಯ ನಾಯಕರಿಗೆ: ಹೊಳಲ್ಕೆರೆ ತಾಲೂಕ ಡಿ.ಎಸ್.ಎಸ್.ಸಮಿತಿಯಿಂದ ಅಭಿನಂದನೆ ಸಮಾರಂಭ

ಹೊಳಲ್ಕೆರೆ : ರಾಷ್ಟ್ರಮಟ್ಟದ ಡಾ. ಬಿ.ಆರ್ ಅಂಬೇಡ್ಕರ್ ಫೆಲೋಷಿಫ್ ಪ್ರಶಸ್ತಿ ಪುರಸ್ಕೃತರಾದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಹಾತ್ಮ ಪ್ರೊಫೆಸರ್ ಬಿ. ಕೃಷ್ಣಪ್ಪ ಸ್ಥಾಪಿತ,ರಿ. ನಂ ೩೮೬/೨೦೨೧–೨೨. ಸಂಘಟನೆಯ ರಾಜ್ಯ ಸಂಚಾಲಕರಾದ ಡಿ ಆರ್ ಪಾಂಡುರಂಗ ಸ್ವಾಮಿ ಹಾಗೂ ರಾಜ್ಯ ಸಂಘಟನಾ ಸಂಚಾಲಕರಾದ ತರೀಕೆರೆ ಎನ್ ವೆಂಕಟೇಶ್. ರವರನ್ನು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಾ ಡಿ.ಎಸ್.ಎಸ್ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಅಭಿನಂದನಾ ಸಮಾರಂಭವನ್ನು ಕೋಡಿಹಳ್ಳಿ ಶಾಖಾ ಮಠದ ಶ್ರೀ ಷಡಕ್ಷರಮುನಿ ಸ್ವಾಮೀಜಿ ಉದ್ಘಾಟನೆ ಮಾಡಿದರು. ಅಭಿನಂದನಾ ಸಮಾರಂಭದಲ್ಲಿ ರಾಜ್ಯ ಸಂಘಟನಾ ಸಂಚಾಲಕರಾದ ಕೊಡಿಗಲ್ ರಮೇಶ್, ಭರ್ಮಪ್ಪ, ಪ್ರಚಾರ ಸಮಿತಿ ರಾಜ್ಯಾಧ್ಯಕ್ಷರಾದ



ದುರ್ಗಾ ದಾಸ್, ರಾಜ್ಯ ಸಮಿತಿ ಸದಸ್ಯರಾದ ಶಿವಕುಮಾರ್,ಮಹಿಳಾ ಒಕ್ಕೂಟದ ರಾಜ್ಯ ಸಮಿತಿ ಸದಸ್ಯರಾದ ತಿಪ್ಪಮ್ಮ, ಜಿಲ್ಲಾ ಸಂಚಾಲಕರಾದ ದಿವಾಕರ್, ತಾಲೂಕು ಸಂಚಾಲಕರಾದ ಪ್ರಸನ್ನ ಕುಮಾರ್ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು.

**ವರದಿ :ಎನ್.ವೆಂಕಟೇಶ್. ತರೀಕೆರೆ**

## ಮೊಳಕಾಲ್ಮುರು: ರೈತ ದಿನಾಚರಣೆಯನ್ನು ಪುಷ್ಪ ಸಮರ್ಪಣೆ ಮಾಡಿ ಆಚರಣೆ





ಮೊಳಕಾಲ್ಮುರು : ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಾ ಪಟ್ಟಣದಲ್ಲಿ ಕ್ಷೇತ್ರದ ಎನ್ ವೈ ಗೋಪಾಲಕೃಷ್ಣ ಶಾಸಕರ ಮಾರ್ಗದರ್ಶನದಲ್ಲಿ ರೈತ ದಿನಾಚರಣೆಯನ್ನು ಕೃಷಿ ಇಲಾಖೆ ಅಧಿಕಾರಿಗಳು ಪ್ರಕಾಶ್ ಇವರ ನೇತೃತ್ವದಲ್ಲಿ ಕೃಷಿ ಮಾಡುವ ರೈತರನ್ನು ಕರೆಸಿ ಸಭೆ ಉದ್ದೇಶಿಸಿ ಮಾತನಾಡಿದರು ರೈತರಿಗೆ ಸರ್ಕಾರದಿಂದ ಬರುವಂತ ಯೋಜನೆಗಳು ಮತ್ತು ಉಪಕರಣಗಳು ಬೀಜ ಗೊಬ್ಬರಗಳು ಮತ್ತು ಔಷಧಿ ಸಿಂಪಡಿಸುವ ಗನ್ನುಗಳು ಸಹ ರೈತರು ಸದುಪಯೋಗ ಪಡೆದು ಕೊಂಡು ಮತ್ತು ಸಾವಯವ ಗೊಬ್ಬರವನ್ನು ಅಳವಡಿಸಿ ಆರ್ಗನೈಕ್ ಔಷಧಿಯನ್ನು ಸಿಂಪಡಿಸಿ ಮೌಲ್ಯವರ್ಧನ ಮುಖ್ಯ ಗುರಿ ಯಾಗಬೇಕು ಬೆಳೆ ಬೆಳೆಯಲು ಅನುಕೂಲ ಮಾಡಿಕೊಳ್ಳಿ ಮತ್ತು ವೆಚ್ಚ ರೈತ ವ್ಯವಸಾಯಕ್ಕೆ ಗಮನ ಹರಿಸಬೇಕು ರೈತರು ಬೆಳೆ ಪರಿಹಾರಗಳು ಪಿಎಂ ಕಿಸಾನ್ ಯೋಜನೆಗಳು ಇನ್ಶೂರೆನ್ಸ್ ಗಳು ನೇರವಾಗಿ ರೈತರ ಖಾತೆಗೆ ತಲುಪಿಸ ಬೇಕೆಂದು ಈ ಕ್ಷೇತ್ರದ ನಿಜವಾದಂತ ಶಾಸಕರು ಕೃಷಿ ಇಲಾಖೆ ಅಧಿಕಾರಿಗಳಿಗೆ ಸಂದೇಶ ಕೊಟ್ಟರು ಸರ್ಕಾರದಿಂದ ಬರುವಂತ ಸೌಲಭ್ಯಗಳು ಅನುಕೂಲತೆ ಮಾಡಿಕೊಳ್ಳಿ ಎಂದು ಕೃಷಿ ಇಲಾಖೆ ಅಧಿಕಾರಿಗಳು ರೈತರಿಗೆ ಮನ ಮುಟ್ಟುವಂತೆ ಮಾತನಾಡಿದರು ಮತ್ತು ಇಫ್ಕೋ ಕಂಪನಿಯಿಂದ ಎಲ್ಲಾ ರೀತಿ ಗೊಬ್ಬರಗಳು ಮತ್ತು ಔಷಧಿಗಳು ಉಪಕರಣಗಳು ಸಿಗುತ್ತವೆ ಇವನ್ನೆಲ್ಲ ರೈತರು ಉಪಯೋಗಿಸಿ ಕೊಂಡು ತನ್ನ ಭೂಮಿಗೆ ಬೇಕಾಗುವ ಬೀಜ ಗೊಬ್ಬರ ಔಷಧಿ ಉಪಕರಣಗಳನ್ನು ತೆಗೆದು ಕೊಳ್ಳಿರಿ ಎಂದು ರೈತರಿಗೆ ತಿಳುವಳಿಕೆ ಹೇಳಿದರು ಈ ಸಂದರ್ಭದಲ್ಲಿ ರೈತ ಸಂಘದ ಸದಸ್ಯರುಗಳು ಮತ್ತು ಶ್ರೀ ನುಂಕೆ ಮೇಲೆ ಸಿದ್ದೇಶ್ವರ ತರಳಬಾಳ ಅಮೃತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಮೊಳಕಾಲ್ಮೂರು ಅಧ್ಯಕ್ಷರು ಕೃಷ್ಣಪ್ಪ ಬಿ ಉಪಾಧ್ಯಕ್ಷರು ಗಂಗಾಧರಯ್ಯ ನಿರ್ದೇಶಕರು ಪೂಜಾರಿ ತಿಪ್ಪಣ್ಣ ನಿರ್ದೇಶಕರ ಮರಿಸ್ವಾಮಿ ಸಿದ್ದಯ್ಯನ ಕೋಟೆ ನಿರ್ದೇಶಕರ ಕಿರಣ್ ಜಿ ಹನುಮಂತಪ್ಪ ಕುರಾಕಲಟ್ಟಿ ರೈತರು ಮೊಳಕಾಲ್ಮೂರು ಗಾಯಕ್ವಾಡ್ ಪ್ರಗತಿಪರ ರೈತರು ಹಾಗೂ ಬಿಎಸ್ಎನ್ಎಲ್ ನೀಲಕಂಠ ಮೊಳಕಾಲ್ಮೂರ್ ಹೆರ್ಜನಳ್ಳಿ ನಂಜಪ್ಪ ನಾಯಕ ಕಾಟನ ಹಳ್ಳಿ ಭೀಮಣ್ಣ ಬೊಮ್ಮಲಿಂಗನಹಳ್ಳಿ ರಾಜಶೇಖರಪ್ಪ ವೀರಬಸಣ್ಣ ಮೊಳಕಾಲ್ಮೂರು ಕನಕ ರೈತ ಸಂಘದ ಸದಸ್ಯ ಶಿವಮೂರ್ತಿ ಮೊಳಕಾಲ್ಮೂರು ಈ ರೈತ ದಿನಾಚರಣೆಯಲ್ಲಿ ಭಾಗವಹಿಸಿ ಪುಷ್ಪ ನಮನ ಸಲ್ಲಿಸಿದರು ಶಿವನಗೌಡ ಸಿದ್ದನಕೋಟೆ ಡಿಪಿ ಕೃಷ್ಣಮೂರ್ತಿ ತಿಪ್ಪೀರನಟ್ಟಿ ರೈತ ಸಂಘದ ಸದಸ್ಯ ಇವರುಗಳಲ್ಲೂ ರೈತ ದಿನಾಚರಣೆಯಲ್ಲಿ ಭಾಗವಹಿಸಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು: ತಿಪ್ಪೇಸ್ವಾಮಿ. ಹೊಂಬಾಳೆ. ಮೊಳಕಾಲ್ಮುರು**

## ಜಿಲ್ಲಾ ಮಟ್ಟದ ಸಿರಿಧಾನ್ಯಗಳ ಪಾಕಸ್ಪರ್ಧೆ: ಜಿಲ್ಲೆಯ ವಿವಿಧ ಭಾಗದ ಮಹಿಳೆಯರು ಭಾಗಿ



ವಿಜಯಪುರ : ಕೃಷಿ ಇಲಾಖೆಯಿಂದ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ವಾಣಿಜ್ಯ ಮೇಳದ ಅಂಗವಾಗಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಡಿ.14 ರಂದು ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ್ ಸ್ಪರ್ಧೆ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಜಂಟಿ ಕೃಷಿ ನಿರ್ದೇಶಕ ಡಾ.ರಾಜಶೇಖರ ವಿಲಿಯಮ್ಸ್ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ಆಧುನಿಕ ಜೀವನ ಶೈಲಿಯಿಂದಾಗಿ ಜನರ ಪಾರಂಪರಿಕ ಆಹಾರ ಪದ್ಧತಿ ಬದಲಾವಣೆ ಹೊಂದಿ ಹಲವಾರು ಕಾಯಿಲೆಗಳು ಜನರು ತುತ್ತಾಗುತ್ತಿದ್ದಾರೆ. ಈ ಎಲ್ಲ ಕಾಯಿಲೆಗಳಿಗೆ ಸಿರಿಧಾನ್ಯಗಳ ಸೇವನೆ ರಾಮಬಾಣವಾಗಿದ್ದು, ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಿರಿ ಧಾನ್ಯಗಳ ಬೇಸಾಯ ಹಾಗೂ ಸೇವನೆಗೆ ಒತ್ತು ನೀಡಿದ್ದು, ಪ್ರಸಕ್ತ 2023ನೇ ವರ್ಷವನ್ನು ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಿದೆ ಎಂದು ಹೇಳಿದರು.

ಸಿರಿಧಾನ್ಯಗಳ ಬೇಸಾಯ ಮತ್ತು ಸೇವನೆಯಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದು, ಸಿರಿಧಾನ್ಯಗಳ ಬೇಸಾಯ ಮತ್ತು ಸೇವನೆಗೆ ಪ್ರೋತ್ಸಾಹಿಸಲು ಬರುವ ಜನವರಿ ಮೊದಲನೇ ವಾರದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ವಾಣಿಜ್ಯ ಮೇಳ–2024 ಹಮ್ಮಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತರು ಸಾರ್ವಜನಿಕರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.

ಸಿರಿಧಾನ್ಯಗಳಿಂದ ವಿವಿಧ ಬಗೆಯ ಖಾದ್ಯಗಳನ್ನು ತಯಾರಿಸಬಹುದಾಗಿದ್ದು, ಈಗಾಗಲೇ ಆತ್ಮ ಯೋಜನೆಯಡಿ ಸುಮಾರು 500 ಮಹಿಳೆಯರಿಗೆ ತರಬೇತಿ ನೀಡಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದವರನ್ನು ರಾಜ್ಯಮಟ್ಟದ ಸ್ಪರ್ಧೆಗೆ ಕಳುಹಿಸಲಾಗುವುದು ಎಂದು ಅವರು ಹೇಳಿದರು.

ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ್ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಮಹಿಳೆಯರು ಭಾಗವಹಿಸಿದ್ದರು. ಸಿಹಿ ತಿಂಡಿ ವಿಭಾಗದಲ್ಲಿ ಮುದ್ದೇಬಿಹಾಳ ತಾಲೂಕಿನ ಬಸರಕೋಡ ಗ್ರಾಮದ ಶ್ರೀಮತಿ ಪುಷ್ಪಾ ಜಿಗಜಿನ್ನಿ ಮತ್ತು ಖಾರದ ತಿಂಡಿ ವಿಭಾಗದಲ್ಲಿ ಚಡಚಣ ತಾಲೂಕಿನ ಲೋಣಿ ಬಿ.ಕೆ. ಗ್ರಾಮದ ಶ್ರೀಮತಿ ಪದ್ಮಾ ಕಲ್ಯಾಣಶೆಟ್ಟಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾದರು. ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ.ಕಾಶಿಬಾಯಿ ಖೇಡಗಿ ಮತ್ತು ಆತ್ಮ ಯೋಜನೆಯ ಉಪ ಯೋಜನಾ ನಿರ್ದೇಶಕ ಡಾ.ಎಂ.ಬಿ.ಪಟ್ಟಣಶೆಟ್ಟಿ ತೀರ್ಪುಗಾರರಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಉಪ ಕೃಷಿ ನಿರ್ದೇಶಕ ಪ್ರಕಾಶ ಚವ್ಹಾಣ, ಚಂದ್ರಕಾಂತ ಪವಾರ, ಬಾಲರಾಜ್, ಸಹಾಯಕ ಕೃಷಿ ನಿರ್ದೇಶಕರುಗಳಾದ ಶ್ರೀಮತಿ ಯಾಸ್ಮಿನ್ ಠಾಣೆದಾರ, ಶ್ರೀಮತಿ ವಿಜಯಲಕ್ಷ್ಮಿ ಚವ್ಹಾಣ ಮತ್ತು ಇತರ ಕೃಷಿ ಅಧಿಕಾರಿಗಳು ಉಪಸ್ಥಿತರಿದ್ದರು.

## ರೊಟ್ಟಿ ಮಾರಾಟ ಮಾಡಿದ ಅತಿಥಿ ಉಪನ್ಯಾಸಕರು

### 23 ನೇ ದಿನಕ್ಕೆ ಕಾಲಿಟ್ಟ ಅತಿಥಿ ಉಪನ್ಯಾಸಕರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ



ಬಾಗಲಕೋಟೆ: ರೊಟ್ಟಿ ಮಾರಾಟ ಮಾಡುವ ಮೂಲಕ ಅತಿಥಿ ಉಪನ್ಯಾಸಕರು ವಿನೂತನವಾಗಿ ಪ್ರತಿಭಟನೆ ಮಾಡಿದರು. ಜಿಲ್ಲಾ ಆಡಳಿತ ಭವನದ ಮುಂದೆ ಹಲವು ದಿನಗಳಿಂದ ನಡೆಯುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಹೋರಾಟದಲ್ಲಿ ಶನಿವಾರ ವಿನೂತನವಾಗಿ ಜೋಳದ ರೊಟ್ಟಿ ಮಾರುವ ಮೂಲಕ ಅತಿಥಿ ಉಪನ್ಯಾಸಕರು ಪ್ರತಿಭಟನೆ ಮಾಡಿ ಗಮನ ಸೆಳೆದರು.

ಪ್ರತಿಭಟನೆಯನ್ನು ಉದ್ದೇಶಿಸಿ ರಾಜ್ಯ ಸ.ಪ್ರ.ದ.ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ಸದಸ್ಯ ಡಾ.ಚಂದ್ರಶೇಖರ ಕಾಳನ್ನವರ ಮಾತನಾಡಿ, ರಾಜ್ಯದ ಎಲ್ಲಾ ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಖಾಯಮಾತಿ ಒಂದೆ ಮುಖ್ಯ ಬೇಡಿಕೆಯಾಗಿದೆ. ಅತಂತ್ರದಲ್ಲಿ ಬದುಕುತ್ತಿರುವ ಅತಿಥಿ ಉಪನ್ಯಾಸಕರ ಬದುಕುಳಿಯುವ ಹೋರಾಟ ಇದಾಗಿದೆ. ಸರ್ಕಾರವು ಈ ನಿಟ್ಟಿನಲ್ಲಿ ಶೀಘ್ರವಾಗಿ ಅತಿಥಿ ಉಪನ್ಯಾಸಕರ ಬೇಡಿಕೆಯಾದ ಸೇವಾ ಖಾಯಮಾತಿ ಮಾಡುವದನ್ನು ಲಿಖಿತ ರೂಪದಲ್ಲಿ ನೀಡಬೇಕು. ಉತ್ತರ ಕರ್ನಾಟಕದ ಜನತೆಯ ಮುಖ್ಯ ಆಹಾರವಾದ ಬಿಳಿಜೋಳದ ರೊಟ್ಟಿಯನ್ನು ಬಾಗಲಕೋಟೆ ಜಿಲ್ಲೆಯ ಅತಿಥಿ ಉಪನ್ಯಾಸಕರಾದ ನಾವು ಬೀದಿಯಲ್ಲಿ ಕುಳಿತು ಮಾರಾಟ ಮಾಡುವ ಮೂಲಕ ಸರ್ಕಾರದ ಗಮನ ಸೆಳೆಯುವ ಕೆಲಸ ಮಾಡಿದೆವು.

ಅತಿಥಿ ಉಪನ್ಯಾಸಕ ಪ್ರೊ.ಸಂಗಮೇಶ ಬ್ಯಾಳಿ ಮಾತನಾಡಿ ನಮ್ಮ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬಹು ದಿನಗಳಿಂದ ಸೇವೆ ಸಲ್ಲಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರಿಗೆ ಸರ್ಕಾರ ಜರೂರಾಗಿ ಸೇವಾ ಭದ್ರತೆ ನೀಡಿ, ಖಾಯಮಾತಿ ಮಾಡಬೇಕು. ಇದರಿಂದ ಅತಿಥಿ ಉಪನ್ಯಾಸಕರ ಸಾವಿರಾರು ಕುಟುಂಬಗಳಿಗೆ ಜೀವನ ನೀಡುವದರ ಜೊತೆಗೆ ಪದವಿ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಿದಂತೆ ಆಗುತ್ತದೆ ಎಂದರು.

ಡಾ.ಮನೋಹರ ಪೂಜಾರ, ಡಾ.ಶಶಿಕಲಾ ಜೋಳದ, ಪ್ರೊ.ನಾಗಯ್ಯ ಜ್ಯೋತೆಪ್ಪನವರ, ಸಂತೋಷ ಕಳ್ಳಿಮನಿ, ಸುನಿಲ್ ಮಠಪತಿ ಜಗದೀಶ್ ಮೊಗ್ನೂರ್, ಎಂ ವೈ ಬಡಿಗೇರ್,ಡಾ.ಪಿಕೆ.ಕಾರಬರಿ, ಡಾ.ನಂದಾ ಇಟಕರ, ಡಾ. ಸಂತೋಷ್ ಕಾಳನ್ನವರ,ಪ್ರೊ. ವಸುಂದರಾದೇವಿ ವೈದ್ಯ, ಡಾ.ಶಾಂತಪ್ಪ, ಮಲ್ಲಿಕಾರ್ಜುನ ರಾಂಪೂರ, ಪ್ರೊ.ಕೀರ್ತಿ ಕುಲಕರ್ಣಿ, ವಾಯ್.ಎಂ. ಹಾಲಿಗೇರಿ, ಪ್ರೊ.ನಾರಾಯಣ ಪತ್ತಾರ, ರಾಘವೇಂದ್ರ ಬಡಿಗೇರಿ, ಕ್ರಷ್ಣಾ ನಾಯಕ, ಪ್ರೊ. ಕರಿಗೌಡರ ಬಾಗಲಕೋಟೆ ಪಟ್ಟಣದ ಸ.ಪ್ರ.ದ ಮಹಿಳಾ ಕಾಲೇಜು, ನವನಗರದ ಸ.ಪ್ರ.ದ ಕಾಲೇಜು ಅತಿಥಿ ಉಪನ್ಯಾಸಕರ ಸೇರಿದ ಜಿಲ್ಲೆಯ ವಿವಿಧ ಕಾಲೇಜುಗಳ ಅತಿಥಿ ಉಪನ್ಯಾಸಕರು ಹೋರಾಟದಲ್ಲಿ ಪಾಲ್ಗೊಂಡಿದ್ದರು.

## ಗದಗಿನ ಕೆ.ಎಲ್.ಇ ಕಾಲೇಜ್ ಆಫ್ ಫಾರ್ಮಸಿ ವಿದ್ಯಾರ್ಥಿಗಳ ಉತ್ತಮ ಫಲಿತಾಂಶ

ಗದಗ : 2022–23ನೇ ಸಾಲಿನ ಆರ್.ಜಿ.ಯು.ಹೆಚ್.ಎಸ್.ನ ಬಿ. ಫಾರ್ಮಸಿ ಪರೀಕ್ಷೆಗಳು ನವಂಬರ್ ತಿಂಗಳಲ್ಲಿ ನಡೆದಿದ್ದು, ಪರೀಕ್ಷಾ ಫಲಿತಾಂಶ ಪ್ರಕಟವಾಗಿದೆ. ಈ ಪರೀಕ್ಷೆಗಳಲ್ಲಿ ಗದಗಿನ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಗೈದಿದ್ದಾರೆ. ಮಹಾವಿದ್ಯಾಲಯದ 2ನೇ ಸೆಮೆಸ್ಟರ್‌ನ ವಿದ್ಯಾರ್ಥಿಗಳಾದ ಅಭಿಷೇಕ್ ಸಾಟೆ–85.24% ಪ್ರಥಮ ಸ್ಥಾನ, ದೀಪಕ್ ಮಟ್ಟಿ–83.03% ದ್ವಿತೀಯ ಸ್ಥಾನ, ನಿಗಾರ್ ದರ್ಗದ್–82.62% ತೃತೀಯ ಸ್ಥಾನ ಗಳಿಸಿದ್ದಾರೆ ಹಾಗು 4ನೇ ಸೆಮೆಸ್ಟರ್‌ನ ವಿದ್ಯಾರ್ಥಿಗಳಾದ ಕಾವ್ಯ ಕಲ್ಲಪ್ಪನವರ–81% ಪ್ರಥಮ ಸ್ಥಾನ, ತೇಜಸ್ವಿನಿ ಗುತ್ತಲ್–78.28% ದ್ವಿತೀಯ ಸ್ಥಾನ, ವೈಷ್ಣವಿ ವೆಂಕನಗೌಡರ–77.85% ತೃತೀಯ ಸ್ಥಾನ ಗಳಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ರಮೇಶ್ ವ್ಹಿ. ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗ ಸಂತಸ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## "ಸತ್ಯ ಶೋಧಕ" ಪುಸ್ತಕ ಬಿಡುಗಡೆ



ಜಮಖಂಡಿ : ಬಾಲಕರ ಸರಕಾರಿ ಪ.ಭಾ ಪ.ಪೂ ಪದವಿ ಕಾಲೇಜು ಜಮಖಂಡಿ, ಮತ್ತು ದಲಿತ ಸಾಹಿತ್ಯ ಪರಿಷತ್ತು, ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ಇವರ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ ಅರಿವಿನ ಪಯಣ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಉದ್ಘಾಟನಾ ಸಮಾರಂಭ ಜರುಗಿತು. ಉದ್ಘಾಟಕರಾಗಿ ಆಗಮಿಸಿದ ಜಮಖಂಡಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಂತೋಷ ತಳಕೇರಿಯವರು. ಸಂವಿಧಾನ ಪೀಠಿಕೆಯನ್ನು ಓದುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಘಟಕವನ್ನು ಉದ್ಘಾಟಿ ಸಲಾಯಿತು. ಜಮಖಂಡಿ ತಾಲೂಕಾ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಈರಪ್ಪ ಸುತಾರವರು ಬರೆದ "ಸತ್ಯ ಶೋಧಕ" ಪುಸ್ತಕವನ್ನು ಹಿರಿಯ ಉಪನ್ಯಾಸಕರಾದ ಅಶೋಕ ರಾಮದುರ್ಗ ಬಿಡುಗಡೆ ಮಾಡಿದರು.

ಕಾರ್ಯಕ್ರಮದ ಆರಂಭದಲ್ಲಿ ಮಹೇಶ ಕಾಂಬಳೆ ಪ್ರಾರ್ಥಿಸಿ ದರು. ಉಪನ್ಯಾಸಕಿ ಸಿ.ಎಸ್. ಜನಗೊಂಡ ಸ್ವಾಗತಿಸಿದರು. ಡಾ. ಲಿಂಗಾನಂದ ಗವಿಮಠ ಪ್ರಾಸ್ತಾವಿಕವಾಗಿ ಮಾತನಾಡುತ್ತ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಗುರಿ ಮತ್ತು ಉದ್ದೇಶಗಳನ್ನು ತಿಳಿಸಿದರು. ಅತಿಥಿಗಳಾಗಿ ಆಗಮಿಸಿದ ಉಪನ್ಯಾಸಕ ಈರಪ್ಪ ಸುತಾರ ಮಾತನಾಡುತ್ತ ಅಂಬೇಡ್ಕರವರು ಮತದಾನದ ಹಕ್ಕಿನ ಮೂಲಕ ಭಾರತದ ಎಲ್ಲ ಪ್ರಜೆಗಳಿಗೂ ಪರಮಾಧಿಕಾರ ನೀಡಿದ್ದಾರೆ ಎಂದು ಹೇಳಿದರು. ಪ್ರಾಚಾರ್ಯರಾದ ಸುರೇಶ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆ ಮೇಲೆ ಉಪನ್ಯಾಸಕಿಯರಾದ ಶ್ರೀಮತಿ ವಿ. ಆರ್. ಬೊಮ್ಮನಹಳ್ಳಿ ಶ್ರೀಮತಿ ಸಿ.ಎಸ್. ಜನಗೊಂಡ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಐ,ಎಸ್,ಹೆಬ್ಬಾಳ ಹೆಚ್.ಎಮ್.ನಾಯಕ ಎಸ್.ಎಮ್.ಕೋರೆ ಹಣಮಂತ ಕಾಂಬಳೆ ಸಂತೊಷ ಕುಮಟಳ್ಳಿ ಉಪಸ್ಥಿತರಿದ್ದರು. ಕೊನೆಯಲ್ಲಿ ಶ್ರೀಕಾಂತ ಮಾದರ ವಂದಿಸಿದರು.

## ಸರ್ವೋದಯ ಪೂರ್ವ ಪ್ರಾಥಮಿಕ, ಪ್ರೌಢಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟ

ಗದಗ : ನಗರದ ಕಳಸಾಪೂರ ರಿಂಗ್ ಹತ್ತಿರವಿರುವ ಸರ್ವೋದಯ ಪೂರ್ವ ಪ್ರಾಥಮಿಕ ಪ್ರೌಢಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟ ಜರುಗಿತು. ಮುಖ್ಯ ಅತಿಥಿಗಳಾಗಿ ಶಾಲೆಯ ಸಂಸ್ಥಾಪಕರಾದ ಕುಬೇರಪ್ಪ ಪವಾರ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಾದ ಕ್ರೀಡೆಯು ಸಹ ಮಗುವಿನ ಬೆಳವಣಿಗೆಗೆ ಅತ್ಯಂತ ಅವಶ್ಯಕವಾಗಿದೆ ಮತ್ತು ಆರೋಗ್ಯ ದೃಷ್ಟಿಯಿಂದ ಕ್ರೀಡಾ ಚಟುವಟಿಕೆಯಲ್ಲಿ ಮಕ್ಕಳು ಭಾಗವಹಿಸಬೇಕೆಂದು ಕರೆ ನೀಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯಲ್ಲಿ ಶಾಲೆಯ ಅಧ್ಯಕ್ಷರಾದ ಡಾ. ಭೀಮಸಿಂಗ್ ರಾಠೋಡರವರು ವಹಿಸಿಕೊಂಡು ಮಾತನಾಡಿದ ಕ್ರೀಡೆ ಇಲ್ಲದೆ ಜೀವನ ಕೀಡೆ ತಿಂದ ಹಣ್ಣಿನಂತೆ ಎಂದು ಹೇಳುವುದರ ಮೂಲಕ ಕ್ರೀಡೆಯ ಮಹತ್ವದ ಬಗ್ಗೆ ತಿಳಿಸಿದರು.

ಈ ಕ್ರೀಡಾಕೂಟದಲ್ಲಿ ಶಾಲೆಯ ದೈಹಿಕ ಶಿಕ್ಷಕರಾದ ಕುಶಾಲ ಲಮಾಣಿಯವರು ಅತ್ಯಂತ ಮಕ್ಕಳ ಕ್ರೀಡಾ ಸ್ಪರ್ಧೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಈ ಸಂದರ್ಭದಲ್ಲಿ ಶಾಲೆಯ ನಿರ್ದೇಶಕರಾದ ಡಾ. ಬಿ. ಎಲ್. ಚವ್ಹಾಣ, ಸಮಾಜ ಸೇವಕರಾದ ಬಸವರಾಜ ಹಿರೇಹಡಗಲಿ, ರಮೇಶ ಚವ್ಹಾಣ, ಶಾಲೆಯ ಆಡಳಿತ ಅಧಿಕಾರಿಗಳಾದ ಡಿ. ಎಸ್. ಸೂರಪ್ಪಗೌಡ್ರ, ಶಾಲೆಯ ಮುಖ್ಯೋಪಾಧ್ಯಾಯನಿಯರಾದ ಪ್ರೇಮಾ ರಾಠೋಡ ಸೇರಿದಂತೆ ಶಾಲೆಯ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವಿವಿಗೆ ಬ್ಲೂ ಆಗಿ ಆಯ್ಕೆ




ಮಹಾಲಿಂಗಪುರ : ಸ್ಥಳೀಯ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಕಲಾ,ವಿಜ್ಞಾನ ಮತ್ತು ಡಿಡಿ ಶಿರೋಳ ವಾಣಿಜ್ಯ ಪದವಿ ಮಹಾವಿದ್ಯಾಲ ಯದ ಬಿ.ಎ ಪ್ರಥಮ ಸೇಮಿಸ್ಟರ ವಿದ್ಯಾರ್ಥಿ ಬಸವರಾಜ ಹೋಳಿ ಬಾಗಲಕೋಟಯ ಬಸವೇಶ್ವರ ದೈಹಿಕ ಶಿಕ್ಷಣ ಮಹಾವಿದ್ಯಾಲ ಯದಲ್ಲಿ ನಡೆದ ಮಲ್ಲಕಂಬ ಸ್ಪರ್ಧೆಯಲ್ಲಿ ಭಾಗವಹಿಸಿ ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ಬ್ಲೂ ಆಗಿ ಆಯ್ಕೆಯಾಗಿದ್ದಾನೆ.

ಮುಂದೆ ಜೈಪುರ ಸುರೇಶ ಜ್ಞಾನವಿಹಾರ ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ ಮಲ್ಲಕಂಬ ಸ್ಪರ್ಧೆಗೆ ಆಯ್ಕೆಯಾಗಿ ಕಾಲೇಜಿನ ಕೀರ್ತಿ ಹೆಚ್ಚಿಸಿದಕ್ಕೆ ಕಾಲೇಜಿನ ಪ್ರಾಚಾರ್ಯರಾದ ಡಾ.ಕೆ.ಎಮ್.ಅವರಾದಿ ಮತ್ತು ಉಪನ್ಯಾಸಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.

# ಜ್ಞಾನ ವಿಜ್ಞಾನ ಸಮಿತಿಯಿಂದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ

## ಸಾಮಾಜಿಕ ಜಾಲತಾಣ ಬಳಕೆಗಿಂತ ಅಂತಹ ತಾಣವನ್ನು ಸೃಷ್ಟಿ ಮಾಡುವ ವಿಜ್ಞಾನಿಗಳಾಗಿ: ಡಾ. ಸಪನಾ ಅನಿಗೋಳ

ಮುಧೋಳ : ಶಿಕ್ಷಣವನ್ನು ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವ ಶಕ್ತಿಯುತ ಸಾಧನ. ಸಾಂಸ್ಕೃತಿಕವಾಗಿ ಬಹುತ್ವ ಸಮಾಜದಲ್ಲಿ, ಶಿಕ್ಷಣದ ಮೂಲಕ ಬೆಳೆಸಿದ ಮೌಲ್ಯಗಳು ಸಾರ್ವತ್ರಿಕಆಕರ್ಷಣೆಯನ್ನುಹೊಂದುತ್ತವೆ ಶಿಕ್ಷಣವು ಅಸ್ಪಷ್ಟತೆ, ಮೂಢನಂಬಿಕೆ,ಧಾರ್ಮಿಕ, ಸಾಮಾಜಿಕ ಅನಿಷ್ಟಗಳನ್ನು ತೊಡೆದುಹಾಕಲು ಸಹಾಯ ಮಾಡುತ್ತದೆಎಂದುರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕಿ ಡಾ.ಸಪನಾ ಅನಿಗೋಳ ಹೇಳಿದರು

ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು,ಜಿಲ್ಲಾ ಹಾಗೂ ತಾಲ್ಲೂಕಾಘಟಕ ಶ್ರೀ ಸಂಗಮನಾಥ ಪ್ರೌಢ ಶಾಲೆ ಸಂಯುಕ್ತಆಶ್ರಯದಲ್ಲಿ ಶನಿವಾರ ನಗರದತ್ರಿವೇಣಿ ಶಿಕ್ಷಣ ಸಂಸ್ಥೆಯ ಶ್ರೀ ಸಂಗಮನಾಥಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಆವರಣದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಸವಿನೆನಪು ರಾಜ್ಯ ಮಟ್ಟದರಸಪ್ರಶ್ನೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಹಾಗೂ ಸಂಯೋಜಕರಿಗೆ ಪ್ರಶಸ್ತಿ ಪ್ರಧಾನಕಾರ್ಯಕ್ರಮದಲ್ಲಿ ಭಾಗಿಯಾಗಿಅವರು ಮಾತನಾಡಿದರು.

ವಿದ್ಯಾರ್ಥಿಗಳುಯಾಂತ್ರಿಕ ಬದುಕಿನಲ್ಲಿ ಸಾಮಾಜಿಕ ಜಾಲತಾಣಗಳು, ತಂತ್ರಜ್ಞಾನಗಳ ಬಳಕೆಗಿಂತ ಅಂತಹ ಮತ್ತೊಂದು ಸಾಧನವನ್ನು ಶೋಧಿಸುವಕಾರ್ಯದಲ್ಲಿ ಮುನ್ನುಗ್ಗಿಯಶಸ್ಸು ನಿಮ್ಮದಾದರೆಜಗತ್ತು ನಿಮ್ಮತ್ತತಿರುತ್ತದೆ, ಸಾಮಾಜಿಕ ಜಾಲತಾಣಗಳ



ಬಳಕೆ ಮಕ್ಕಳಿಗೆ ಉಪಯುಕ್ತಗಿಂತ ಮಾರಕವಾಗಬಹುದು ಒಳ್ಳೆಯದನ್ನು ನೋಡುತ್ತಾಕೆಟ್ಟದತ್ ಸಾಗಬಹುದುಇದುಸರಿಯಾದಕ್ರಮವಲ್ಲಎಂದು ಹೇಳಿದರು.

ತ್ರಿವೇಣಿ ಶಿಕ್ಷಣ ಸಂಸ್ಥೆಯಕಾರ್ಯಾಧ್ಯಕ್ಷ ಶಿಶಿರ ಮಲಘಾಣ ಮಾತನಾಡಿ ವಿದ್ಯಾರ್ಥಿಗಳಿಗೆ ಹೊಸದನ್ನು ಬೋಧಿಸುವ ಸಂದರ್ಭದಲ್ಲಿಗಣಿತ ವಿಜ್ಞಾನ ಹಾಗೂ ಸಾಹಿತ್ಯವನ್ನು ಕಳಿಸಿ ಭವಿಷ್ಯದ ವಿಜ್ಞಾನಗಳು ಶಾಲೆ ಕೊಠಡಿಯಲ್ಲಿರುತ್ತಾರೆಅಂತವರನ್ನುಗುರುತಿಸುವಕಾರ್ಯ ಶ್ಲಾಘನಿಯಎಂದು ಹೇಳಿದರು.

ಜ್ಞಾನ ವಿಜ್ಞಾನ ಸಮಿತಿಜಿಲ್ಲಾಧ್ಯಕ್ಷ ಸಿದ್ದಣ್ಣ ಬಾಡಗಿ,ಪ್ರಧಾನ ಕಾರ್ಯದರ್ಶಿ ಸಂಜಯ ನಡುವಿನಮನಿ,ತಾಲ್ಲೂಕಾಅಧ್ಯಕ್ಷ ವೆಂಕಟೇಶ ಗುಡೆಪ್ಪನವರ,ಆಡಳಿತಾಧಿಕಾರಿ ಮಲ್ಲು ಕಳ್ಳೆನ್ನವರ ಮಾತನಾಡಿದರು.

ಕಾರ್ಯಕ್ರಮ ಸಂಯೋಜಕರಾದ ಆಶಾಬಿ ಮುಲ್ಲಾ,ನಸೀಮಾ ನದಾಫ್ ಪ್ರೇಮಾ ಮಾದರ,ವೆಂಕಣ್ಣ ಅಳ್ಳಿಮಟ್ಟಿ ಅವರಿಗೆ ಫಲಕ ಹಗೂ ಸನ್ಮಾನ ಪತ್ರ ನೀಡದರು.ಒಟ್ಟು 207 ವಿದ್ಯಾರ್ಥಿಗಳೊಗೆ ಪ್ರಶಸ್ತಿ ಪತ್ರ ನೀಡಿಗೌರವಿಸಲಾಯಿತು. ಕಾರ್ಯಕ್ರಮದಲ್ಲಿಜಿಲ್ಲಾ ಮಟ್ಟದರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ ಪಡೆದ ಮುಸ್ಕಾನ್ ಮುಲ್ಲಾ,ದ್ವಿತೀಯ ಸ್ಥಾನ ಪಡೆದತಬಸುಮ್ ಮಂಟೂರ,ತೃತೀಯ ಸ್ಥಾನ ಪಡೆದ ಪ್ರತೀಕ್ಷಾ ಬಟಕುರ್ಕಿ, ತಾಲ್ಲೂಕಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಸೌಮ್ಯ ಕಳ್ಳೆನ್ನವರ,ಪ್ರೀತಮ ಪಲ್ಲೇದ,ಸೃಷ್ಟಿ ನರೋಜಿಗೆ ನಗದು ಹಾಗೂ ಪ್ರಶಸ್ತಿ ಪತ್ರ ಫಲಕ ನೀಡಿಗೌರವಿಸಲಾಯಿತು.

> "ಮನೋರೋಗ ತಜ್ಞ ಡಾ.ಸಿ.ಆರ್. ಚಂದ್ರಶೇಖರ ಅವರ ನೇತೃತ್ವದ ಜ್ಞಾನ ವಿಜ್ಞಾನ ಸಮಿತಿ ರಾಜ್ಯದ ಮಕ್ಕಳಲ್ಲಿ ವಿಜ್ಞಾನದ ಜೊತೆಗೆ ಜ್ಞಾನವನ್ನು ಕೊಡುತ್ತಾ ಮೂಡನಂಬಿಕೆಗಿಂತ ಮೂಲನಂಬಿಕೆ ಮುಖ್ಯ ಎಂಬ ತತ್ವವನ್ನು ವಿದ್ಯಾರ್ಥಿಗಳ ಜೀವನದಲ್ಲಿ ಅಳವಡಿಸಿ ಸಾಮಾಜದಲ್ಲಿ ವೈಜ್ಞಾನಿಕಕ್ರಾಂತಿಯನ್ನು ಬಿಂಬಿಸುವ ಕಾರ್ಯ ಮಾಡುತ್ತಿದೆ".
>
> **–ಸಪನಾ ಅನಿಗೋಳ ರಾಷ್ಟ್ರ ಪ್ರಶಸ್ತಿ ವಿಜೇತ ವಿಜ್ಞಾನ ಶಿಕ್ಷಕಿ**

# ಸೈಬರ್ ವಂಚನೆಗೆ ಬಲಿಯಾಗದಿರಿ: ಹೆಡ್ ಕಾನ್ಸ್‌ಟೆಬಲ್ ವೈ.ವೈ. ಗಚ್ಚನ್ನವರ



ಮಹಾಲಿಂಗಪುರ : ತಂತ್ರಜ್ಞಾನ ಬದಲಾದಂತೆ ಕಳ್ಳರು ಕೂಡ ಅಪ್‌ಡೇಟ್ ಆಗುತ್ತಿದ್ದಾರೆ. ವಿದ್ಯಾರ್ಥಿಗಳು ಸೈಬರ್ ವಂಚನೆಗೆ ಬಲಿಯಾದಿರಿ ಎಂದು ಸ್ಥಳೀಯ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೆಬಲ್ ವೈ.ವೈ.ಗಚ್ಚನ್ನವರ ಹೇಳಿದರು.

ಸ್ಥಳೀಯ ಕೆಎಲ್ಇ ಪಿಯು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆನ್‌ಲೈನ್ ವ್ಯವಹಾರಕ್ಕಿಂತ ಆಫ್‌ಲೈನ್ ವ್ಯವಹಾರ ಸುರಕ್ಷಿತ, ಕಲಿಯುವ ವಯಸ್ಸಿನಲ್ಲಿ ಸಾಮಾಜಿಕ ಜಾಲತಾಣಗಳ ಮೋಸದ ಜಾಲಕ್ಕೆ ಬಲಿಯಾಗಬಾರದು. ಕಾನೂನು ಜ್ಞಾನ ಬೆಳೆಸಿಕೊಂಡು ಸರಕಾರದ ನೆರವಿನ ಹೆಲ್ಪ್‌ಲೈನ್ ಬಳಸಿಕೊಂಡು ಸುರಕ್ಷಿತ ಬದುಕು ನಡೆಸಬೇಕು ಎಂದರು.

ಉಪನ್ಯಾಸಕ ಶಿವಲಿಂಗ ಸಿದ್ನಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ಎಲ್.ಬಿ.ತುಪ್ಪದ ಅಧ್ಯಕ್ಷತೆವಹಿಸಿದ್ದರು. ವಾಣಿಜ್ಯ ವಿಭಾಗದ ಮುಖ್ಯಸ್ಥ ಜಿ.ವೈ.ಕಿತ್ತೂರ, ದೈಹಿಕ ಶಿಕ್ಷಣ ನಿರ್ದೇಶಕ ಬಿ.ಎಂ.ಸಿದ್ನಾಳ, ಉಪನ್ಯಾಸಕ ಬಿ.ಬಿ.ಯಲ್ಲಟ್ಟಿ ಇದ್ದರು.

## ಬೆಳಗಾವಿಯಲ್ಲಿ ನಡೆದ ಮಹಿಳೆಮೆಲಿನ ದೌರ್ಜನ್ಯ ಖಂಡಿಸಿ ಬಿಜೆಪಿಯಿಂದ ಪ್ರತಿಭಟನೆ

# ಸಿಎಂ ಸಿದ್ದರಾಮಯ್ಯ ರಾಜಿನಾಮೆ ಕಾರಜೋಳ ಆಗ್ರಹ

ಬಾಗಲಕೋಟೆ : ಅಧಿವೇಶನ ನಡೆದ ಸಮಯದಲ್ಲಿಯೆ ಬೆಳಗಾವಿಯಲ್ಲಿ ನಡೆದ ಮಹಿಳೆ ಮೆಲೆ ದೌರ್ಜನ್ಯ ಏಸೆಗಿರುವುದು ಮಹಿಳೆಯರಿಗೆ ಭದ್ರತೆ ಇಲ್ಲದಂತಾಗಿದೆ, ಇದರ ನೈತಿಕತೆಯನ್ನು ಹೊತ್ತು ಸಿದ್ದರಾಮಯ್ಯ ಸಿ.ಎಂ.ಸ್ಥಾನಕ್ಕೆ ರಾಜಿನಾಮೆ ನಿಡಬೇಕು ಎಂದರು.

ಅವರು ಬೆಳಗಾವಿಯಲ್ಲಿ ನಡೆದ ಮಹಿಳೆಮೆಲಿನ ದೌರ್ಜನ್ಯ ಖಂಡಿಸಿ ಭಾರತೀಯ ಜನತಾ ಪಾರ್ಟಿ ಜಿಲ್ಲಾಘಟಕದಿಂದ ನಗರದ ಬಸವೇಶ್ವರ ವೃತ್ತದಲ್ಲಿ ನಡೆದ ಪ್ರತಿಭಟನೆಯನ್ನೂದ್ದೇಶಿಸಿ ಮಾತನಾಡಿದರು.

ರಾಜ್ಯದಲ್ಲಿ ಸಿದ್ರಾಮಯ್ಯನವರ ನೇತೃತ್ವದ ಕಾಂಗ್ರೇಸ್ಸ ಸರಕಾರ ಅಧಿಕಾರಕ್ಕೆ ಬಂದಮೇಲೆ ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ, ದೀನ ದಲಿತರಿಗೆ ರಕ್ಷಣೆ ಇಲ್ಲದಂತಾಗಿದೆ, ಇವತ್ತು ದೀನ ತಲಿತರ ಮೆಲೆ ನಿರಂತರ ಹಲ್ಲೆಗಳಾಗುತ್ತಿವೆ, ಬೆಳಗಾವಿಯಲ್ಲಿ ನಡೆದ ಎರಡು ಕಹಿ ಘಟನೆಗಳನ್ನು ಯಾರು ಮರಿಲಿಕ್ಕೆ ಸಾದ್ಯವಿಲ್ಲಾ, ಪ್ರಜಾಪ್ರಭುತ್ವದ ಕಳಂಕ ಅನ್ನುವ ರೀತಿಯಲ್ಲಿ ಮಹಿಳೆಮೆಲೆ ದೌರ್ಜನ್ಯವಾಗಿದ್ದು, ಮಹಿಳೆಯನ್ನು ಬೆತ್ತಲೆಮಾಡಿ ಮೇರವಣಿಗೆ ಮಾಡಿದ್ದು,ಕಂಬಕ್ಕೆ ಕಟ್ಟಿ ಹೊಡೆದಿದ್ದು, ಈ ಸರಕಾರಕ್ಕೆ ಕಪ್ಪು ಚುಕ್ಕೆಯಾಗಿದ್ದು ಈ ಸರಕಾರ ಯಾವುದೆ ಕಾರಣಕ್ಕೂ ರಾಜ್ಯದಲ್ಲಿ ಮುಂದುವರೆಬಾರದು, ಗೃಹಮಂತ್ರಿ ಪರಮೇಶ್ವರ,ಮುಖ್ಯಮಂತ್ರಿ ಸಿದ್ರಾಮಯ್ಯ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಕೂಡಲೆ ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಬೇಕು ಎಂದು ಆಗ್ರಹಿಸಿದರು,




ಬೆಳಗಾವಿಯಿಲ್ಲಿ ಬಿಜೆಪಿ ಕಾರ್ಯಕರ್ತ ಪೃಥ್ವಿ ಸಿಂಗ ಮೇಲೆ ಮಾರಣಾಂತಿಕ ಹಲ್ಲೆಮಾಡಿದ್ದು,ಸ್ವತಹ ಮಂತ್ರಿ ಲಕ್ಷ್ಮೀ ಹೆಬ್ಬಾಳ್ಕರ ಸಹೋದರ ಶಾಸಕ ಹಟ್ಟಿಹೊಳೆ ಅವರೆ ಸ್ವತ ಈ ಕೃತ್ಯ ಏಸಗಿದ್ದಾರೆ, ಇದು ಖಂಡನೀಯ ಈ ಘಟನೆಯಲ್ಲಿ ಬಾಗಿಯಾದ ಚೆನ್ನರಾಜ ಹಟ್ಟಿಹೊಳಿ ಅವರನ್ನು ಬಂಧಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ ಅವರು ನಿಷ್ಪಕ್ಷವಾದ ತನಿಖೆಯಾಗಲು ಲಕ್ಷ್ಮೀ ಹೆಬ್ಬಾಳ್ಕರ ಅವರನ್ನು ಕೂಡಲೆ ಸಂಪೂಟದಿಂದ ವಜಾ ಮಾಡಬೇಕು ಆಗ್ರಹಿಸಿ ಇದರಿಂದ ದಲಿತರ ರಕ್ಷಣೆ ಸಾಧ್ಯ ಎಂದರು.

ಇದೆ ಸಂಧರ್ಭದಲ್ಲಿ ಮಾತನಾಡಿದ ಸಂಸದ ಪಿಸಿ ಗದ್ದಿಗೌಡರ ಮಾತನಾಡಿ ರಾಜ್ಯದಲ್ಲಿರುವ ಕಾಂಗ್ರೇಸ್ಸ ಸರಕಾರ ಬೇಳಗಾವಿ ಘಟನೆಯನ್ನು ನಿರ್ಲಕ್ಷೆ ಮಾಡಿದ್ದು, ಯಾವುದೆ ಸಚಿವರು,ಮಂತ್ರಿಗಳು ಆ ಘಟನಾ ಸ್ಥಳಕ್ಕೆ ಬೇಟಿ ನೀಡದೆ ಇದ್ದು ವಿಷಾದನಿಯ, ಕೇಂದ್ರದಿಂದ ಮಹಿಳಾ ಸಂಸದರ ತಂಡ ಬೆಳಗಾವಿ ಬೇಟಿ ನಿಡಿದ್ದು ಇದನ್ನು ಭಾರತೀಯ ಜನತಾ ಪಾರ್ಟಿ ಈ ಘಟನೆಯನ್ನು ಗಂಭಿರವಾಗಿ ಪರಗನಿಸಿದೆ, ತಪ್ಪಿಸ್ಥತ್ತರಿಗೆ ಕಠಿಣ ಶಿಕ್ಷೇಯಾಗಲಿ ಎಂದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ,ವಿಧಾನ ಪರಿಷತ್ತ ಮಾಜಿ ಸದಸ್ಯ ನಾರಾಯಣಸಾ ಭಾಂಡಗೆ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ. ಬೆಳಗಾವಿ ಸಹ ಪ್ರಭಾರಿ ಬಸವರಾಜ ಯಂಕಂಚಿ, ಜಿಲ್ಲಾ ಉಪಾಧ್ಯಕ್ಷ ಅಶೋಕ ಲಿಂಬಾವಳಿ,ನಾರಾಯಣ ಯಡಹಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ,ಮಲ್ಲಯ್ಯ ಮೂಗನೂರಮಠ, ಜಿ.ಎನ್.ಪಾಟೀಲ, ಸತ್ಯನಾರಾಯಣ ಹೆಮಾದ್ರಿ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣರು, ಕಲ್ಲಪ್ಪ ಭಗವತಿ, ಮಲ್ಲೇಶ ವಿಜಾಪುರ, ನಗರಮಂಡಲ ಅಧ್ಯಕ್ಷ ಸದಾನಂದ ನಾರಾ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಹೊಸುರು. ಜ್ಯೋತಿ ಭಜಂತ್ರಿ, ಶೋಭಾ ರಾವ,ಅನಿತಾ ಸರೋದೆ,ಶಿವಲೀಲಾ ಪಟ್ಟಣಶೇಟ್ಟಿ,ಉಮಾ ಚೇಟ್ಟರಕಿ, ,ರಾಜು ಕೋಟೆಕಲ್,ಶ್ರೀಶೈಲ ಗಾಣಿಗೇರ.ನಾಗರಾಜ ಕಟ್ಟಿಮನಿ, ಸುವರ್ಣ ಪಾಟೀಲ,ಪವಿತ್ರ ತುಕ್ಕನ್ನವರ,ಕಾವೇರಿ ರಾಥೋಡ, ವಿಜಯ ಚೆಟ್ಟರಕಿ, ಲಕ್ಷ್ಮೀನಾರಾಯಣ ಕಾಸಟ್,ಬಸವರಾಜ ಹುನಗುಂದ,ಉಮೇಶ ಹಂಚಿನಾಳ,ಜಿಲ್ಲಾ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ ಭುವನೇಶ್ವರ ಪೂಜಾರ, ಸೇರಿದಂತೆ ಅನೇಕ ಜನ ಕಾರ್ಯಕರ್ತರು ಪ್ರತಿಭಟಣೆಯಲ್ಲಿ ಭಾಗವಹಿಸಿದ್ದರು.

ಶಿವಾನಂದ ಜೀನನ್ನಿಂದ ಪ್ರಾರಂಭವಾದ ಪ್ರತಿಭಟನಾ ಮೇರವಣಿಗೆ ಬಸವೇಶ್ವರ ವೃತ್ತದಲ್ಲಿ ಸಮಾವಣೆಗೊಂಡು ಪ್ರತಿಭಟಿಸಲಾಯಿತು.

# ಬಂಗಾರ ಲೇಪಿತ ಕಳಸದ ಭವ್ಯ ಮೆರವಣಿಗೆ

## ಕಳಸದ ಮೆರವಣಿಗೆಗೆ ವಾದ್ಯ ಮೇಳಗಳ ಮೆರಗು । ಒಂದು ಕಿ.ಮೀ ಉದ್ದದ ಭವ್ಯ ಮೆರವಣಿಗೆ । ನಗರದ ರಸ್ತೆ ತುಂಬ ಗಮನ ಸೆಳೆದ ರಂಗೋಲಿ

ರಬಕವಿ–ಬನಹಟ್ಟಿ : ನಗರದ ಆರಾಧ್ಯ ದೇವರಾದ ಕಾಡಸಿದ್ಧೇಶ್ವರ ದೇವಸ್ಥಾನದ ಗೋಪುರ ಬಂಗಾರ ಲೇಪಿತ ಕಳಸದ ಭವ್ಯ ಮೆರವಣಿಗೆ ಸೋಮವಾರ ನಗರ ದ ಪ್ರಮುಖ ಬೀದಿಗಳಲ್ಲಿ ಸಂ ಭ್ರಮ ಸಡಗರದಿಂದ ನೆರವೇರಿತು.

ಸ್ಥಳೀಯ ಹಿರೇಮಠದ ಶರಣಬಸವ ಶಿವಾಚಾರ್ಯರು ಮತ್ತು ನಗರದ ಮುಖಂಡರು ಸಾಮೂಹಿಕ ಮಂಗಳಾರುತಿ ಯನ್ನು ನೆರವೇರಿಸುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಕಳಸವನ್ನು ಪ್ರತಿಷ್ಠಾಪಿಸಲಾಗಿದ್ದ ರಥವನ್ನು ಹೂ ಮಾಲೆ ಹಾಗೂ ವಿದ್ಯುತ್ ದೀಪಗಳಿಂದ ಶೃಂಗರಿಸಲಾಗಿತ್ತು. ನೂರಾರು ಮಹಿಳೆಯರು ಆರತಿ ಮತ್ತು ಕುಂಭವನ್ನು ಹೊತ್ತುಕೊಂಡು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಕಳಸದ ಮೆರವಣಿಗೆ ನಡೆಯುವ ಮಾರ್ಗ ವನ್ನು ರಂಗೋಲಿಯಿಂದ ಶೃಂಗರಿಸಲಾಗಿತ್ತು.

ನಗರದ ವೈಭವ ಚಿತ್ರಮಂದಿರದಿಂದ ಪ್ರಾರಂಭವಾದ ಕಳಸದ ಮೆರವಣಿಗೆ ನಗರದ ಸೋಮವಾರ ಪೇಟೆ, ಶಂಕರಲಿಂಗ ದೇವಸ್ಥಾನ, ವಿಠ್ಠಲ ಮಂದಿರ, ಹಳೇ ಲೈಬ್ರರಿ, ವೀರಭದ್ರೇಶ್ವರ ದೇವಸ್ಥಾನ, ಗಾಂಧಿ ಸರ್ಕಲ್, ಮಂಗಳವಾರ ಪೇಟೆ ನಡು ಚೌಕಿ, ಅರುಣ ಚಿತ್ರ ಮಂದಿರ ಮೂಲಕ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀ ಕಾಡಸಿದ್ದೇಶ್ವರ ದೇವಸ್ಥಾನದ ವರೆಗೆ ಮೂರು ಗಂಟೆಗಳಿಗಿಂತ ಹೆಚ್ಚು ಕಾಲ ವಿಜ್ರಂಭಣೆಯಿಂದ ನಡೆಯಿತು.

ಮೆರವಣಿಗೆಯಲ್ಲಿ ಹಲಗೆ ಮೇಳ, ಸಂಭಾಳ, ವೀರಗಾಸೆ ಪುರವಂತರ ಕಲಾ ತಂಡ ಹಾಗೂ ಕರಡಿವಾದನ ಸೇರಿದಂತೆ ವಿವಿಧ ವಾದ್ಯ ಮೇಳಗಳು ಮೆರವಣಿಗೆಗೆ ಕಳೆ ತಂದವು. ಆರತಿ ಹಾಗೂ ಕುಂಭ ಹೊತ್ತ ಸಾವಿರಾರು



ಮಹಿಳೆಯರು ಮೆರವಣಿಗೆಯಲ್ಲಿ ಹುಮ್ಮಸ್ಸಿನಿಂದ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷ ಶ್ರೀಪಾದ ಬಾಣಕಾರ, ರಾಜಶೇಖರ ಸೋರಗಾಂವಿ, ಭೀಮಶಿ ಮಗದುಮ್, ಗಂಗಪ್ಪ ಮುಗತಿ, ಸಿದ್ದನಗೌಡ ಪಾಟೀಲ, ರಾಜಶೇಖರ ಮಾಲಾಪುರ, ಪಂಡಿತ ಪಟ್ಟಣ, ಶಂಕರ ಜುಂಜಪ್ಪನವರ, ಈಶ್ವರ ಬಿದರಿ, ಮಲ್ಲಿಕಾರ್ಜುನ ತುಂಗಳ, ಮಲ್ಲಿನಾಥ ಕಕಮರಿ, ಮಹಾಶಾಂತ ಶೆಟ್ಟಿ, ಪ್ರಶಾಂತ ಕೊಳಕಿ, ಮಲ್ಲಪ್ಪ ಜನವಾಡ, ದಾನಪ್ಪ ಹುಲಜತ್ತಿ , ಪಂಡಿತ ಪಟ್ಟಣ, ಶಂಕರ ಬಾಣಕಾರ, ಸಿದ್ದೂ ಮುನ್ನೋಳ್ಳಿ , ಅಶೋಕ ಭದ್ರನ್ನವರ, ಅಣ್ಣಪ್ಪ ಬಾಣಕಾರ, ಅಶೋಕ ರಾವಳ, ಶೇಖರ ಜವಳಗಿ, ಬ್ರಿಜ್ಮೋಹನ ಡಾಗಾ, ಶಾಂತಾ ಮಂಡಿ, ಶಾಂತಾ ಸೋರಗಾಂವಿ, ಪವಿತ್ರಾ ತುಕ್ಕನ್ನವರ, ಮಾಲಾ ಬಾವಲತ್ತಿ , ಶೈಲಜಾ ನುಚ್ಚಿ , ಮಹಾನಂದಾ ಕುಳ್ಳಿ , ಸಾವಿತ್ರಿ ಕಾಡದೇವರ, ಪಾರ್ವತಿ ಪೂಜಾರಿ, ಮಹಾದೇವಿ ಕಾಡದೇವರ, ಅರ್ಚಕರಾದ ಗಿರಮಲ್ಲಯ್ಯ ಕಾಡದೇವರ, ಪರಮೇಶ್ವರ ಕಾಡದೇವರ, ರುದ್ರಯ್ಯ ಕಾಡದೇವರ, ಅಶೋಕ ಕಾಡದೇವರ, ನಿಜಗುಣಿ ಕಾಡದೇವರ, ಮಲ್ಲಪ್ಪ ಹೂಲಿ, ಶಿವಕುಮಾರ ಜುಂಜಪ್ಪನವರ, ಪ್ರಭಾಕರ ಮೊಳೇದ, ರಾಜು ಬಾಣಕಾರ, ಸಿದ್ರಾಮ ಸವದತ್ತಿ , ಸುರೇಶ ಚಿಂಡಕ, ಓಂಪ್ರಕಾಶ ಕಾಬರಾ, ವಿರುಪಾಕ್ಷಪ್ಪ ಕೊಕಟನೂರ,

ಅಣ್ಣಪ್ಪ ಬಾಣಕಾರ, ಮಹಾಂತೇಶ ಯಾದವಾಡ, ಪ್ರಕಾಶ ಬೀಳಗಿ, ಶ್ರೀಶೈಲ ಬೀಳಗಿ, ಈರಣ್ಣ ಹೊನವಾಡ, ಕಿರಣ ಭದ್ರನ್ನವರ, ಶ್ರೀಶೈಲ ಗೊಂಬಿ, ಸಂಜಯ ಶಿವಪೂಜಿ, ಸಂಜಯ ಜವಳಗಿ, ಬಸವರಾಜ ಜಾಡಗೌಡ, ಶ್ರೀಶೈಲ ಯಾದವಾಡ, ಪ್ರವೀಣ ಧಬಾಡಿ, ಕಾಡಪ್ಪ ಧಬಾಡಿ, ಮಲ್ಲಿಕಾರ್ಜುನ ಬಾವಲತ್ತಿ , ಪ್ರಕಾಶ ಮಂಡಿ, ಕಲ್ಲಪ್ಪ ಹೊರಟ್ಟಿ, ಮೋಹನ ಪತ್ತಾರ, ಚಿದಾನಂದ ಪತ್ತಾರ, ಶಂಕರ ಹೂಗಾರ, ಶಿವಾನಂದ ಗಾಯಕವಾಡ, ಈರಣ್ಣ ಚಿಂಚಖಂಡಿ ಸೇರಿದಂತೆ ಸಾವಿರಾರು ಜನ ಮೆರವಣಿಗೆ ಯಲ್ಲಿ ಭಾಗವಹಿಸಿದ್ದರು.

# ಕಾಲೇಜು ವಿದ್ಯಾರ್ಥಿಗಳಿಂದ ಅಧಿವೇಶನ ವಿಕ್ಷಣೆ




ಮಹಾಲಿಂಗಪುರ : ಸ್ಥಳೀಯ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಕಲಾ,ವಿಜ್ಞಾನ ಮತ್ತು ಡಿಡಿ ಶಿರೋಳ ವಾಣಿಜ್ಯ ಪದವಿ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನದ ಕೊನೆಯ ದಿನ ಅಧಿವೇಶನ ವಿಕ್ಷಣೆ ಮಾಡಿದರು. ಉಪನ್ಯಾಸಕ ಎ.ಎಂ.ಉಗಾರೆ ಇದ್ದರು.

# ಡಿ.24 ರಿಂದ ಶಾಂತವೀರ ಶಿವಾಚಾರ್ಯರ 33ನೇ ಚಿರಲಿಂಗಾಂಗ ಸಾಮರಸ್ಯ ದಿನೋತ್ಸವ

ರಬಕವಿ–ಬನಹಟ್ಟಿ: ಡಿಸೆಂಬರ್ 24 ರಿಂದ 28 ರವರೆಗೆ ಬನಹಟ್ಟಿ ನಗರದ ಹಿರೇಮಠದಲ್ಲಿ ಲಿಂಗೈಕ್ಯ ಶಾಂತವೀರ ಶಿವಾಚಾರ್ಯರ 33 ನೇ ಚಿರಲಿಂಗಾಂಗ ಸಾಮರಸ್ಯ ದಿನೋತ್ಸವದ ಅಂಗವಾಗಿ ಅಧ್ಯಾತ್ಮಿಕ ಪ್ರವಚನ, ಬೆಳಕು ಚಿಂತನ ಕಾರ್ಯಕ್ರಮದ ಜೊತೆಗೆ ಧಾರ್ಮಿಕ

ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶರಣಬಸವ ಶಿವಾಚಾರ್ಯರು ತಿಳಿಸಿದರು.

ದಿ. 24 ರಂದು ಸಂಜೆ 6–30 ಕ್ಕೆ ಅಧ್ಯಾತ್ಮಿಕ ಪ್ರವಚನದ ಉದ್ಘಾಟನೆ ನಡೆಯಲಿದ್ದು , ಶ್ರೀಶೈಲದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯ ವಹಿಸಲಿದ್ದಾರೆ. ಜಮಖಂಡಿಯ





ಕಲ್ಯಾಣ ಮಠದ ಗೌರಿಶಂಕರ ಶಿವಾಚಾರ್ಯರು, ಕೊಣ್ಣೂರ ಹೊರಗಿನಮಠದ ಡಾ. ವಿಶ್ವಪ್ರಭು ಶಿವಾಚಾರ್ಯರು, ಜಮಖಂಡಿ ಶಾಸಕ ಜಗದೀಶ ಗುಡಗುಂಟಿ, ತೇರದಾಳ ಶಾಸಕ ಸಿದ್ದೂ ಸವದಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಜೈನಾಪುರದ ರೇಣುಕ ಶಿವಾಚಾರ್ಯರು ಪ್ರವಚನ ನೀಡಲಿದ್ದಾರೆ.

ದಿ. 27 ರಂದು ಸಂಜೆ 6–30 ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಜಮಖಂಡಿಯ ಮುತ್ತಿನಕಂತಿಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು ಸಾನಿಧ್ಯ ವಹಿಸಲಿದ್ದಾರೆ. ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು ನೇತೃತ್ವ ವಹಿಸಲಿದ್ದಾರೆ. ಸಚಿವ ಆರ್. ಬಿ. ತಿಮ್ಮಾಪುರ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಕಾರ್ಯಕ್ರಮದಲ್ಲಿ ಬಾಗವಹಿಸಲಿದ್ದಾರೆ.

ದಿ. 28 ರಂದು ಬೆಳಿಗ್ಗೆ ಶಾಂತವೀರ ಶಿವಾಚಾರ್ಯರ ಗದ್ದುಗೆಗೆ ರುದ್ರಾಭಿಷೇಕ, ಅಯ್ಯಾಚಾರ, ಲಿಂಗದೀಕ್ಷಾ ಕಾರ್ಯಕ್ರಮದ ಜೊತೆಗೆ ನಗರದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಸೇವೆ ನಡೆಯಲಿದೆ.

ನಗರದ ಮುಖಂಡರಾದ ಶ್ರೀಪಾದ ಬಾಣಕಾರ, ಶ್ರೀಶೈಲ ಧಬಾಡಿ, ರಾಜಶೇಖರ ಮಾಲಾಪುರ, ಮಲ್ಲಿಕಾರ್ಜುನ ತುಂಗಳ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಮಡಿವಾಳಪ್ಪನವರ ತ್ಯಾಗವನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ: ದುರಡಿ

ರಬಕವಿ–ಬನಹಟ್ಟಿ: ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದ ರಬಕವಿ ನಗರದಲ್ಲಿ ಕನ್ನಡ ಶಾಲೆಯನ್ನು ಆರಂಭಿಸಿ, ಈ ಭಾಗದಲ್ಲಿ ಕನ್ನಡ ಶಿಕ್ಷಣಕ್ಕೆ ಮಹತ್ವ ನೀಡಿದ ಮಡಿವಾಳಪ್ಪ ಪಟ್ಟಣರ ಕಾರ್ಯ ಶ್ರೇಷ್ಠವಾದುದು ಎಂದು ರಬಕವಿಯ ಎಜ್ಯುಕೇಶನ್ ಸೊಸೈಟಿಯ ಚೇರ್ಮನರಾದ ಬೋಜಪ್ಪ ನಾಗಪ್ಪ ದುರಡಿ ತಿಳಿಸಿದರು.

ಭಾನುವಾರ ಇಲ್ಲಿನ ಹೊಸ ಬಸ್ ನಿಲ್ದಾಣದ ಹತ್ತಿರದ ಮಡಿವಾಳಪ್ಪ ವೀರಪ್ಪ ಪಟ್ಟಣ ಪ್ರೌಢ ಶಾಲೆಯಲ್ಲಿ ಮಡಿವಾಳಪ್ಪ ಪಟ್ಟಣ ಅವರ 74 ನೇ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಅವರ ಪುತ್ಥಳಿಯ ಮೆರವಣಿಗೆ ಮತ್ತು ಪಲ್ಲಕ್ಕಿ ಸೇವೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಶೈಕ್ಷಣಿಕ ಅಭಿವೃದ್ಧಿಗಾಗಿ ಪಟ್ಟಣ ಅವರ ತ್ಯಾಗ ಮಹತ್ತರವಾದುದು. ಮುಂದಿನ ದಿನಗಳಲ್ಲಿ ಈ ಭಾಗದಲ್ಲಿ ಶಿಕ್ಷಣವನ್ನು ಇನ್ನಷ್ಟು ಅಭಿವೃದ್ಧಿ ಪಡಿಸುವುದರ ಜೊತೆಗೆ ಇಲ್ಲಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದಿಶೆಯಲ್ಲಿ ಗಮನ ನೀಡಲಾಗುವುದು ಎಂದು



ದುರಡಿ ತಿಳಿಸಿದರು.

ಮಡಿವಾಳಪ್ಪ ಪಟ್ಟಣ ಅವರ ಪುತ್ಥಳಿ ಮತ್ತು ಪಲ್ಲಕ್ಕಿ ಸೇವೆ ನಗರದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ಮೇಳದೊಂದಿಗೆ ನಡೆಯಿತು.

ನಾರಾಯಣ ಬೋರಗಿನಾಯಕ, ಬಸವರಾಜ ಯೆಂಡಿಗೇರಿ, ಈಶ್ವರ ಬಿ. ಬೀಳಗಿ, ಬಿ. ಎಂ. ಮಟ್ಟಿಕಲ್ಲಿ , ಚಿದಾನಂದ ಸೊಲ್ಲಾಪುರ, ಪ್ರಾಚಾರ್ಯ ಬಿ. ಎಸ್. ಕಾಂಬಳೆ, ಉಪನ್ಯಾಸಕರಾದ ರಾಜೇಶ ನೋಟದ, ಎಸ್. ಎಂ. ತಳವಾರ, ಯಶವಂತ ವಾಜಂತ್ರಿ, ಆರ್. ಎಸ್. ಬೆಲ್ಲಮ್, ವಿ. ವಿ. ಯರಗುಂಟಿ, ಶ್ರೀಮತಿ ಎಂ. ಎ. ಪಾಯೆ, ಎಸ್.ಬಿ. ಬೇಡರಟ್ಟಿ ಹಾಗೂ ಪ್ರಕಾಶ ಕೊಣ್ಣೂರ, ಎಂ. ಕೆ. ಮುರಗೋಡ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ದಾನಿಗೊಂಡ ಸಂಸ್ಥೆಯಲ್ಲಿ ಹ್ಯಾಂಡ್‌ಬಾಲ್ ಪಂದ್ಯಾವಳಿ ಸೋಲಿಗೆ ಹೆದರದೆ ಇದ್ದಾಗ ಗೆಲವು ಸಾಧ್ಯ-ರವಿ ಗೋಲಾ




ತೇರದಾಳ : ಕ್ರೀಡೆ ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಬಹಳಷ್ಟು ಪೂರಕವಾಗಿದೆ. ಆದ್ದರಿಂದ ಕ್ರೀಡೆಯಲ್ಲಿ ಸೋಲು ಗೆಲವು ಲೆಕ್ಕ ಹಾಕಬಾರದು. ಕ್ರೀಡಾಪಟುಗಳು ಸೋಲಿಗೆ ಹೆದರದೆ ಇದ್ದಾಗ ಮಾತ್ರ ಗೆಲವು ಸಾಧ್ಯ ಎಂದು ರಾಜ್ಯ ದೈಹಿತ ನಿರ್ದೇಶಕರ ಸಂಘದ ರಾಜ್ಯಾಧ್ಯಕ್ಷ ಪ್ರೊ. ರವಿ ಗೋಲಾ ಹೇಳಿದರು.

ಇಲ್ಲಿನ ಪ್ರತಿಷ್ಠಿತ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆ ಹಾಗೂ ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯ ಆಶ್ರಯದಲ್ಲಿ ಭಾನುವಾರ ದಾನಿಗೊಂಡ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ಏಕವಲಯ ಅಂತರ್ ಹ್ಯಾಂಡ್‌ಬಾಲ್ ಪಂದ್ಯಾವಳಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವೈದ್ಯಕೀಯ ಜತೆಗೆ ಶಿಕ್ಷಣ ಕ್ಷೇತ್ರ ಪ್ರಾರಂಭಿಸಿರುವುದು ನಿಜಕ್ಕೂ ಡಾ. ದಾನಿಗೊಂಡ ಅವರ ಕಾರ್ಯ ಶ್ಲಾಘನೀಯ ಎಂದು ಬಣ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಚೇರಮನ್ ಡಾ. ಮಹಾವೀರ ದಾನಿಗೊಂಡ, ಕ್ರೀಡಾಪಟುಗಳನ್ನು ಬೆಳೆಸುವ ಕೆಲಸ ನಿರಂತರವಾಗಿ ಸಾಗಬೇಕು. ಆದರೆ ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದಾಗಿ ಅದು ಸಾಧ್ಯ ಆಗುತ್ತಿಲ್ಲ. ಆದರೂ ದೇಶದ ಕ್ರೀಡಾಪಟುಗಳು ಅಂತರಾಷ್ಟ್ರಮಟ್ಟದ ಬೇರೆ ಬೇರೆ ಕ್ರೀಡೆಗಳಲ್ಲಿ ಪದಕಗಳನ್ನು ತರುವುದು ನಿಲ್ಲಿಸಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರಾಣಿ ಚೆನ್ನಮ್ಮ ವಿವಿ ದೈಹಿಕ ನಿರ್ದೇಶಕ ಡಾ. ಜಗದೀಶ ಗಸ್ತಿ ಮಾತನಾಡಿದರು. ದಾನಿಗೊಂಡ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಸಂತೋಷ ಕೃಷ್ಣಾಪುರೆ, ದೈಹಿಕ ನಿರ್ದೇಶಕ ರಾಮು ಹಾಡಕರ ಮತ್ತಿತರಿದ್ದರು. ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಯ ಪುರುಷ ಹಾಗೂ ಮಹಿಳೆಯರ 28 ತಂಡಗಳು ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು.

# ಶಿವಶರಣರು ತಮ್ಮ ಪ್ರಾಣ ಒತ್ತೆಯಿಟ್ಟು ವಚನ ಸಾಹಿತ್ಯವನ್ನು ಉಳಿಸಿದ್ದಾರೆ: ಲೇಖಕ, ಚಿಂತಕ ಮಣ್ಣೆ ಮೋಹನ್




ನೆಲಮಂಗಲ : "12 ಯೋಜನೆ ವಿಸ್ತಾರದ, 60 ಲಕ್ಷ ಜನಸಂಖ್ಯೆಯ ಕಲ್ಯಾಣ ನಗರದ ರಾಜ ಬಿಜ್ಜಳನ ಆಸ್ಥಾನದಲ್ಲಿ ಅನುಭಾವ ಮಂಟಪವನ್ನು ಸ್ಥಾಪಿಸಿ, ಎಲ್ಲಾ ಜಾತಿಗಳ ಎಲ್ಲಾ ವೃತ್ತಿಗಳ ಜನರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ವೇದಿಕೆಯನ್ನು ಕಲ್ಪಿಸಿ, ಅವರಿಂದ ವಚನಗಳನ್ನು ಬರೆಸಿ, ಶ್ರೇಷ್ಠ ಶರಣ ಪರಂಪರೆಯೊಂದನ್ನು ರೂಪಿಸಿದ ಬಸವಣ್ಣನವರು ಜಗತ್ತು ಕಂಡ ಮಹಾನ್ ಕ್ರಾಂತಿಕಾರಿ. 770 ಅಮರಗಣಂಗಳು, 3,000 ವಿರಕ್ತರು, 12,000 ಷಟ್ ಸ್ಥಳ ಬ್ರಹ್ಮಗಳು ಮತ್ತು 1,96,000 ಶರಣರು ಬಸವಣ್ಣನವರ ಜೊತೆ ಇದ್ದರೆಂದರೆ ಅವರ ಸಾಧನೆಯ ಶಿಖರದ ಅಗಾಧತೆಯ ಅರಿವಾಗುತ್ತದೆ. ಈ ಎಲ್ಲಾ ಶರಣರಿಂದ ರೂಪುತಳೆದ ವಚನ ಸಾಹಿತ್ಯ ಜಗತ್ತು ಕಂಡ ಶ್ರೇಷ್ಠ ಸಾಹಿತ್ಯವಾಗಿದೆ" ಎಂದು ಲೇಖಕ ಚಿಂತಕ ಮಣ್ಣೆ ಮೋಹನ್ ತಿಳಿಸಿದರು. ಅವರು ತಾಲೂಕಿನ ದೇವರಹೊಸಹಳ್ಳಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಏರ್ಪಡಿಸಿದ್ದ "ಶಾಲೆಯಿಂದ ಶಾಲೆಗೆ ಕನ್ನಡ ರಾಜ್ಯೋತ್ಸವ 50ರ ಸಂಭ್ರಮ" ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿ ಮಾತನಾಡುತ್ತಿದ್ದರು.

ಮುಂದುವರೆದ ಮಾತನಾಡಿದ ಅವರು "ಕಲ್ಯಾಣ ಕ್ರಾಂತಿಯ ಸಮಯದಲ್ಲಿ ಚನ್ನಬಸವಣ್ಣ ಮತ್ತು ಮಡಿವಾಳ ಮಾಚಿದೇವರು ವಚನಗಳ ಕಟ್ಟನ್ನು ಸಂರಕ್ಷಿಸಿ, ಅವುಗಳನ್ನು ಉಳವಿಗೆ ಸಾಗಿಸಿ, ನಮಗೆ ವಚನ ಸಾಹಿತ್ಯ ಉಳಿಯುವಂತೆ ಮಾಡಿದರು. ಶಿವಶರಣರು ತಮ್ಮ ಪ್ರಾಣ ಒತ್ತೆಯಿಟ್ಟು ವಚನ ಸಾಹಿತ್ಯವನ್ನು ಉಳಿಸಿದರು. ಕಲ್ಯಾಣ ಕ್ರಾಂತಿಯು, ವಚನ ಶರಣರನ್ನು ವೀರ ಶರಣರನ್ನಾಗಿಸಿತು. ನಾವು ಅವರಿಗೆ ಚಿರಋಣಿಯಾಗಿರಬೇಕು. ಹಾಗೆಯೇ ಶಿವಶರಣರಂತೆ ಇಂದಿನ ಮಕ್ಕಳು ಸಾಹಿತ್ಯ, ಸಂಗೀತ, ಕಲೆ ಇವುಗಳನ್ನು ಮೈಗೂಡಿಸಿಕೊಳ್ಳಬೇಕು. ಅದಕ್ಕಾಗಿ ತಾಲೂಕು ಕಸಾಪ ವತಿಯಿಂದ ಹಳ್ಳಿ ಹಳ್ಳಿಗಳಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ನಾಡಿಗೆ ಪರಿಚಯಿಸಲಾಗುವುದು ಎಂದರು.

ತಾಲೂಕು ಕಸಾಪ ಅಧ್ಯಕ್ಷರಾದ ಬಿ ಆರ್ ಪ್ರದೀಪ್ ಕುಮಾರ್ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಕರ್ನಾಟಕ ಏಕೀಕರಣ ಹೋರಾಟದ ಮಹನೀಯರನ್ನು ನೆನೆಯುತ್ತಾ, ತಾಲೂಕಿನಲ್ಲಿಯೂ ಕನ್ನಡವನ್ನು ಕಟ್ಟಿದ ಮಹನೀಯರನ್ನು ನೆನೆಯುತ್ತಾ,

ಮೈಸೂರು ರಾಜ್ಯದ ಉದಯ ಮತ್ತು ಆನಂತರ ಕರ್ನಾಟಕವೆಂದು ಹೆಸರಾದ ನಂತರದ ನಾಡು ನುಡಿಯ ಬೆಳವಣಿಗೆಯನ್ನು ಸವಿಸ್ತಾರವಾಗಿ ವಿವರಿಸಿದರು.

ತಾಲೂಕು ಕಸಾಪ ಗೌರವ ಕಾರ್ಯದರ್ಶಿ ಬಿ ಪ್ರಕಾಶ್ ಮೂರ್ತಿ ಅವರು ಮಾತನಾಡಿ "ಈ ನಮ್ಮ ಶಾಲೆಯು ನೆಲಮಂಗಲ ತಾಲೂಕಿನ ಗಡಿಭಾಗದಲ್ಲಿದ್ದರೂ ಒಳ್ಳೆಯ ವಾತಾವರಣವನ್ನು ಹೊಂದಿದೆ. ವೀರಭದ್ರ ಸ್ವಾಮಿಯ ತಪ್ಪಲಲ್ಲಿ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಲು ಈ ಶಾಲೆಯ ಮುಖ್ಯಶಿಕ್ಷಕರು ಬಹಳ ಶ್ರಮ ವಹಿಸುತ್ತಿದ್ದಾರೆ. ಅಲ್ಲದೆ ಮಕ್ಕಳು ತಾಯಿ ತಂದೆಗೆ ಗೌರವ ಕೊಡುವಂತೆ ಕನ್ನಡ ಭಾಷೆಗೂ ಗೌರವ ಕೊಡಬೇಕು. ಪ್ರತಿಯೊಬ್ಬರೂ ಭಾಷೆಯನ್ನು ಪ್ರೀತಿಸಬೇಕು" ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯಶಿಕ್ಷಕರಾದ ಡಿ ಎಸ್ ಸೋಮಶೇಖರಯ್ಯ ಅವರು ಮಾತನಾಡಿ "ಪ್ರಪಂಚದ 10 ಶ್ರೇಷ್ಠ ಸಾಹಿತಿಗಳಲ್ಲಿ ಭಾರತದ ವಾಲ್ಮೀಕಿ, ವೇದವ್ಯಾಸ ಮತ್ತು ಕಾಳಿದಾಸರು ಸೇರಿದ್ದಾರೆ. ಹಾಗೆಯೇ ಕನ್ನಡದಲ್ಲಿ ಎಂಟು ಜನ ಕವಿಗಳು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದು ಕನ್ನಡ ಭಾಷೆಯ ಕೀರ್ತಿ ಪತಾಕೆ ಹಾರಿಸಿದ್ದಾರೆ" ಎಂದು ಕನ್ನಡದ ಹಿರಿಮೆಯನ್ನು ಕೊಂಡಾಡಿದರು. ಮಕ್ಕಳಿಗೆ ಧ್ಯಾನ, ಶ್ಲೋಕದ ಮಹತ್ವವನ್ನು ತಿಳಿಸುವುದರ ಮೂಲಕ ಸಾಹಿತಿ ಸದಾನಂದಾರಾಧ್ಯರು ಮಕ್ಕಳ ಮನಗೆದ್ದರು. ತಾಲೂಕು ರೈತ ಹಿತರಕ್ಷಣ ಸಮಿತಿಯ ಕಾರ್ಯದರ್ಶಿ ಕೆ.ಸಿ ರಮೇಶ್ ಅವರು ಮಾತನಾಡಿ, ಅನೇಕ ರೈತ ಪರ ಹೋರಾಟ ಮತ್ತು ಕನ್ನಡ ಪರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ತಮ್ಮ ಅನುಭವಗಳನ್ನು ಮೆಲುಕು ಹಾಕಿದರು. ಕನ್ನಡ ಶಿಕ್ಷಕರಾದ ಕಾಂತರಾಜುರವರು ಮಾತನಾಡಿ ಕನ್ನಡ ನಾಡು ನುಡಿಯ ಮಹತ್ವದ ಬಗ್ಗೆ ಮಕ್ಕಳಿಗೆ ತಿಳಿಸಿದರು.

ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮೂಲಕ ಮತ್ತು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಶಾಲಾ ಮಕ್ಕಳು ನಾಡಗೀತೆ ಹಾಡಿದರು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಿಧನರಾದ ಕನ್ನಡದ ಮೇರು ನಟಿ ಲೀಲಾವತಿರವರಿಗೆ ಮೌನಾಚರಣೆ ಮೂಲಕ ಶ್ರಧ್ಧಾಂಜಲಿ ಅರ್ಪಿಸಲಾಯಿತು. ಕವನ ರಚನೆ, ಪ್ರಬಂಧ ರಚನೆ, ಗೀತ ಗಾಯನ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಸಾಹಿತಿ ಶಿರಾಜ್ ಅಹಮದ್, ಪ್ರೇಮ್ ಕುಮಾರ್, ಸೋಂಪುರ ಹೋಬಳಿಯ ಅಧ್ಯಕ್ಷರಾದ ಶ್ರೀಕಾಂತ್, ನಗರಘಟಕದ ಅಧ್ಯಕ್ಷ ಮಲ್ಲೇಶ್, ರಂಗ ಕಲಾವಿದ ಕೃಷ್ಣಯ್ಯ, ರುದ್ರೇಶ್, ಕೆ.ಜಿ ಕುಮಾರ್, ಕುಮಾರಿ ವರ್ಷ, ಶಿಕ್ಷಕಿ ಲಕ್ಷ್ಮಿ ಪ್ರಿಯದರ್ಶಿನಿ, ಶಿಕ್ಷಕರಾದ ನಾಗನಾಯ್ಕ, ಜಗದೀಶ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಘು ಟಿ ಎಸ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಹಿರಿಯ ಶಿಕ್ಷಕಿ ನಾಗರತ್ನಮ್ಮ ರವರು ಸ್ವಾಗತ ಕೋರಿದರು. ರಂಗಶಾಮಯ್ಯ ನವರು ವಂದನಾರ್ಪಣೆ ನೆರವೇರಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಚೌಡಕಿ ಪದದ ಕಲಾವಿದರಿಗೆ ಪ್ರೋತ್ಸಾಹ ಅಗತ್ಯ
# ಗಮನ ಸೆಳೆದ ಚೌಡಕಿ ಪದಗಳು



ರಬಕವಿ-ಬನಹಟ್ಟಿ: ಚೌಡಕಿ ಪದಗಳನ್ನು ಹಾಗೂ ಕಲಾವಿದರನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಪ್ರಮುಖ ಕರ್ತವ್ಯವಾಗಿದೆ. ಈ ಕಲೆ ಮತ್ತು ಕಲಾವಿದರಿಗೆ ಪ್ರೋತ್ಸಾಹ ಅಗತ್ಯವಾಗಿದೆ ಎಂದು ನಗರದ ಗೌಡರಾದ ಸಿದ್ದನಗೌಡ ಪಾಟೀಲ ತಿಳಿಸಿದರು.

ಶನಿವಾರ ರಾತ್ರಿ ನಗರದ ಮಂಗಳವಾರ ಪೇಟೆಯಲ್ಲಿ ಯಲ್ಲಮ್ಮ ದೇವಿಗೆ ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡ ಚೌಡಕಿ ಪದಗಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬೆಳಗಲಿ ಗ್ರಾಮದ ಭರಮೇಶ್ವರ ಚೌಡಕಿ ಗಾಯನ ತಂಡದ ಯಮನವ್ವ , ಸುನಂದಾ, ಭಾಗವ್ವ , ಯಲ್ಲವ್ವ , ಅರುಣ ಕ್ಯಾತಪ್ಪಗೋಳ, ಬಾಡಗಿ ಗ್ರಾಮದ ಭಕ್ತೇಶ್ವರ ಗಾಯನ ತಂಡದ ನಿಂಬೆವ್ವ , ದ್ರಾಕ್ಷಾಯಣಿ, ಯಲ್ಲವ್ವ ಪಡೆವ್ವಾ, ಬನಹಟ್ಟಿ ತಂಡದ ಯಲ್ಲವ್ವ , ಮಹಾನಂದಾ, ಪ್ರೇಮಾ, ಕಸ್ತೂರಿ, ಶೈಲಾ, ಶೋಭಾ, ಬಂಗಾರೆವ್ವ, ಮುತ್ತವ್ವಾ, ಹಾಗೂ ಹುನ್ನೂರು ತಂಡದ ಕಲಾವಿದರು ಚೌಡಕಿ ಪದಗಳ ಪ್ರದರ್ಶನ ನೆರವೇರಿಸಿದರು.

ಜಯವಂತ ಮಿಳ್ಳಿ , ಕಾಡಪ್ಪ ಶೇಗುಣಸಿ, ಕಾಡಪ್ಪ ತೇಲಿ, ಮಲ್ಲು ಮಿರ್ಜಿ, ನೇಸೂರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಸಂಗಮ ಸೊಸೈಟಿಯ ಚುನಾವಣೆ

ರಬಕವಿ-ಬನಹಟ್ಟಿ : ರಾಮಪೂರದ ಸಂಗಮ ಕೋ-ಆಪ್ ಕ್ರೆಡಿಟ್ ಸೊಸೈಟಿಯ ಆಡಳಿತ ಮಂಡಳಿಯ ಚುನಾವಣೆ ಭಾನುವಾರ ಜರುಗಿತು. ಒಟ್ಟು ಏಳು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎಂಟು ಜನ ಅಭ್ಯರ್ಥಿಗಳು ಕಣದಲ್ಲಿದ್ದರು. ಅದರಲ್ಲಿ ಬುದ್ದಪ್ಪ ಬಸಪ್ಪ ಕುಂದಗೋಳ, ರಾಜಶೇಖರ ಟೆಂಗಿನಕಾಯಿ, ಪ್ರಭಾಕರ ಪತ್ತಾರ, ಕಲ್ಲಪ್ಪ ಕುಳ್ಳಿ , ಗೊಡಚೆಪ್ಪ ಹೊಸಕೋಟಿ, ರಾಮದಾಸ ಸಿಂಘನ, ಶ್ರೀಶೈಲ ಕೌಜಲಗಿ ಸೇರಿದಂತೆ ಏಳು ಜನ ಆಯ್ಕೆಯಾಗಿದ್ದು , ಇನ್ನಾಫಸಾಬ ಸಂತಿ ಪರಾಭವಗೊಂಡಿದ್ದಾರೆ.

## ಈರವ್ವ ಹಿರೇಮಠ ನಿಧನ




ಮಹಾಲಿಂಗಪುರ: ಪಟ್ಟಣದ ದಲಾಲ ಬಡಾವಣೆ ನಿವಾಸಿ, ಜಂಗಮ ಸಮಾಜದ ಈರವ್ವ ಶಿವಯ್ಯಾ ಹಿರೇಮಠ (65) ನಿಧನರಾದರು.

## ಸಿದ್ದವ್ವ ಬನಹಟ್ಟಿ ನಿಧನ



ಮಹಾಲಿಂಗಪುರ ಸಮೀಪದ ಸೈದಾಪುರ ಗ್ರಾಮದ ನಿವಾಸಿ, ಶತಾಯುಷಿ ಸಿದ್ದವ್ವ ಲಗಮಣ್ಣ ಬನಹಟ್ಟಿ (105) ಭಾನುವಾರ ನಿಧನರಾದರು. ಮೃತರು ಆರು ಜನ ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಚಿಕ್ಕಾಲಗುಂಡಿ ಮಾರುತೇಶ್ವರಕಾರ್ತಿಕೋತ್ಸವ ಸಂಪನ್ನ



ಬೀಳಗಿ : ತಾಲೂಕಿನಚಿಕ್ಕಾಲಗುಂಡಿಗ್ರಾಮದ ಮತ್ತು ಅಸಂಖ್ಯಾತ ಭಕ್ತರ ಪಾಲಿನ ಆರಾಧ್ಯ ದೈವನಾಗಿರುವ ಮಾರುತೇಶ್ವರನಕಾರ್ತಿಕೋತ್ಸವ ಶನಿವಾರ ಸಂಜೆ ಶ್ರದ್ಧಾ, ಭಕ್ತಿ, ಸಡಗರದಿಂದ ಜರುಗಿತು.

ಗ್ರಾಮದಎಲ್ಲ ದೇವಾಲಯಗಳ ಮುಂದೆ ದೀಪೋತ್ಸವ, ಬೀದಿ, ಮನೆಗಳ ಮುಂದೆ ದೀಪಗಳು ಪ್ರಜ್ವಲಿಸಿದವು. ಮಾರುತೇಶ್ವರ ದೇವಾಲಯದಲ್ಲಿ ವಿವಿಧ ಬಗೆಯ ವಿದ್ಯುತ್ ದೀಪಾಲಂಕಾರ ನೋಡುಗರ ಮನತಣಿಸಿತಲ್ಲದೆ, ಆಕಾಶವೇ ಧರೆಗಿಳಿದಂತೆ ಬಾಸವಾಯಿತು.

ಸಂಜೆಕಾರ್ತಿಕೋತ್ಸವಕ್ಕೆ ಚಾಲನೆ ದೊರೆಯುತ್ತಿದ್ದಂತೆ ವಿವಿಧ ಚಿತ್ತಾರದ ಸೀರೆ ಉಟ್ಟ ಮಹಿಳೆಯರು, ಯುವತಿಯರು, ಮಕ್ಕಳು, ಪುರುಷರು, ತರುಣರು ಹಣತೆಗಳಿಗೆ ಎಣ್ಣೆ ಹಾಕಿ ಭಕ್ತಿ ಸಮರ್ಪಿಸಿದರು. ನೈವೇಧ್ಯ, ಕಾಯಿ-ಕರ್ಪೂರ ಅರ್ಪಿಸಿ ತಮ್ಮನ್ನು ಕುಟುಂಬವನ್ನು ರಕ್ಷಿಸುವಂತೆ ಮಾರುತೇಶ್ವರ ಸನ್ನಿಧಾನದಲ್ಲಿ ನೂತನ ಸಂಕಲ್ಪದ ಹರಕೆ ಹೊತ್ತರು. ಮಲ್ಲಿಕಾರ್ಜುನ ಮಠದಿಂದಎತ್ತಿನ ಬಂಡಿಯಲ್ಲಿ ಮಾರುತೇಶ್ವರ ಭಾವಚಿತ್ರ, ಮದ್ದು ಮತ್ತುಎಣ್ಣೆಯೊಂದಿಗೆ ಮೆರವಣಿಗೆ ಸಕಲ ವಾದ್ಯ, ವೈಭವಗಳೊಂದಿಗೆ ಮಾರುತೇಶ್ವರದೇವಾಲಯಕ್ಕೆ ಆಗಮಿಸಿತು.

ದೀಪೋತ್ಸವ: ಜಾಗೃತ ತಾಣವಾದ ಮಾರುತೇಶ್ವರ ದೇವಾಲಯದಲ್ಲಿ ಅಸಂಖ್ಯಾತ ಭಕ್ತರ ಸಮ್ಮುಖದಲ್ಲಿರಾತ್ರಿ 8:30 ಗಂಟೆಗೆ ಮಲ್ಲಿಕಾರ್ಜುನ ಮಠದ ಶಿವಶರಣಾನಂದ ಸ್ವಾಮಿಗಳು ದೀಪೋತ್ಸವಕ್ಕೆ ಚಾಲನೆ ನೀಡಿದರು. ಗ್ರಾಪಂ ಮಾಜಿ ಉಪಾಧ್ಯಕ್ಷ ದತ್ತಣ್ಣ ದೇಶಪಾಂಡೆ, ಕನ್ನಡಜಾನಪದ ಪರಿಷತ್‌ಜಿಲ್ಲಾಧ್ಯಕ್ಷ ಡಿ. ಎಂ.ಸಾವಕಾರ, ಪಿಕೆಪಿಎಸ್ ಮಾಜಿಅಧ್ಯಕ್ಷ ಭೀಮಪ್ಪ ತಳವಾರ, ಮಾರುತಿ ಹಾದಿಮನಿ, ಶೇಖರಕೈನಕಟ್ಟಿ, ಅರ್ಚಕರಾದ ಆಲಗುಂಡೆಪ್ಪ ಪೂಜಾರಿ, ಲಕ್ಷ್ಮಣ ಪೂಜಾರಿ ಹಾಗೂ ದೇವಾಲಯ ವ್ಯವಸ್ಥಾಪನಾ ಸಮಿತಿ ಸದಸ್ಯರು, ಗ್ರಾಮದ ಪ್ರಮುಖರು ದೀಪೋತ್ಸವದಲ್ಲಿ ಪಾಲ್ಗೊಂಡಿದ್ದರು. ಆಕಾಶದಲ್ಲಿ ವಿವಿಧಚಿತ್ತಾರ : ಬಾನಂಗಳದಲ್ಲಿ ಮೂಡಿದ ಬಣ್ಣ-ಬಣ್ಣದ ಚಿತ್ತಾರಗಳು, ಆಕಾಶದಿಂದ ಸುರಿದ ಬೆಳಕಿನ ಮಳೆ, ಕಿವಿಗಡಚಿಕ್ಕುವ ಭಾರೀ ಸದ್ದಿನೊಂದಿಗೆ ಭುವಿಯಿಂದಒಂದರ ಹಿಂದೊಂದು ನಭೋಮಂಡಲಕ್ಕೆಚಿಮ್ಮುತ್ತಿದ್ದ ರಾಕೇಟ್‌ಗಳು... ಇದು ಮದ್ದು ಸುಡುವಕಾರ್ಯಕ್ರಮದಲ್ಲಿಕಂಡು ಬಂದ ದೃಶ್ಯಗಳು. ಭುವಿಯಿಂದ ಶರವೇಗದಲ್ಲಿ ಭಾರೀ ಸದ್ದಿನೊಂದಿಗೆ

ಚಿಮ್ಮುತ್ತಿದ್ದ ಸಿಡಿಮದ್ದುಗಳು ನೀಲಾಕಾಶದಲ್ಲಿ ಮೂಡಿಸುತ್ತಿದ್ದ ಬಣ್ಣದ ಚಿತ್ತಾರಗಳು ನೋಡುಗರ ಮನಸೂರೆಗೊಂಡವು. ಬೆಳಕಿನ ಬಣ್ಣದಚಿತ್ತಾರವನ್ನು ಪ್ರೇಕ್ಷಕರು ಮೊಬೈಲ್‌ಕೆಮೆರಾದಲ್ಲಿ ಸೆರೆ ಹಿಡಿಯುತ್ತಿದ್ದದೃಶ್ಯ ಸಾಮಾನ್ಯವಾಗಿತ್ತು.

ನಾಟಕ ಪ್ರದರ್ಶನ: ಹವ್ಯಾಸಿ ರಂಗಭೂಮಿಕಲಾವಿದರಿಂದ ವೀರ ಸಿಂಧೂರ ಲಕ್ಷ್ಮಣ ನಾಟ್ಯ ಸಂಘದಿಂದ ನೇಗಿಲಿಗೆ ಶೃಂಗಾರ, ರೈತನಿಗೆ ಬಂಗಾರಅರ್ಥಾತ್ ಶೃಂಗಾರದ ಹೆಣ್ಣಿಗೆ ಬಂಗಾರದ ಮೂಗುತಿ ಎಂಬ ಸುಂದರ ಸಾಮಾಜಿಕ ನಾಟಕಗಳು ಜರುಗಿದವು.

# ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮ ಉದ್ಘಾಟನೆ
## ಏಡ್ಸ್ ನಿರ್ಮೂಲನೆ ಯುವ ಜನಾಂಗ ಪಾತ್ರ ಮುಖ್ಯ: ಹನುಮಂತಪ್ಪ




ಬಾದಾಮಿ : ಏಡ್ಸ್ ರೋಗ ನಿರ್ಮೂಲನೆಯಲ್ಲಿ ಯುವ ಜನಾಂಗದ ಪಾತ್ರ ಮುಖ್ಯವಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ವಿ.ಹನುಮಂತಪ್ಪ ಹೇಳಿದರು.

ಅವರು ಶುಕ್ರವಾರ ತಾಲೂಕು ಕಾನೂನು ಸೇವಾ ಪ್ರಾಧಿಕಾರ, ಆರೋಗ್ಯ ಇಲಾಖೆ, ವಿವಿದ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಏಡ್ಸ್ ದಿನಾಚರಣೆ ಪ್ರಯುಕ್ತ ತಾಲೂಕ ಆರೋಗ್ಯಾಧಿಕಾರಿಗಳ ಕಾರ್ಯಾಲಯದಲ್ಲಿ ಹಮ್ಮಿಕೊಂಡ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಎಚ್.ಐ.ವಿ.ಏಡ್ಸ್ ನಿಯಂತ್ರಣ ಮಾಡುವುದು ಪ್ರತಿಯೊಬ್ಬ ನಾಗರಿಕನ ಹಕ್ಕು ಈ ಮಾರಕ ರೋಗಕ್ಕೆ ಬಲಿಯಾಗದೆ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಹಿರಿಯ ಆರೋಗ್ಯ ನಿರೀಕ್ಷಣಾದಿಕಾರಿ ಪಿ.ಎಚ್.ಮಹಾಲಿಂಗಪೂರ ಮಾತನಾಡಿ ಎಚ್.ಐ.ವಿ.ಏಡ್ಸ್ ನಿಯಂತ್ರಣ ಮಾಡುವಲ್ಲಿ ಯುವಜನತೆಯ ಪಾತ್ರ ಬಹಳಷ್ಟು ಇದೆ ಹಾಗೂ ನಿರೋದ್ ಬಳಸುವುದರಿಂದ ಆಗುವ ಪ್ರಯೋಜನ ಲೈಂಗಿಕ ಕಾಯಿಲೆಗಳು ಹಾಗೂ ಬೇಡವಾದ ಗರ್ಭವನ್ನು ಹಾಗೂ ಈ ಎಚ್.ಐ.ವಿ.ಏಡ್ಸ್ ಅನ್ನು ತಡೆಗಟ್ಟುವಲ್ಲಿ ಬಹಳ ಉಪಯುಕ್ತವಾಗಿದೆ ಎಂದು ತಿಳಿಸಿದರು.

ಆಪ್ತಸಮಾಲೋಚಕಿ ಶೋಭಾ ಕೊಣ್ಣೂರ ವಿಶೇಷ ಉಪನ್ಯಾಸ ನೀಡಿ ಮಾತನಾಡಿ ಎಚ್.ಐ.ವಿ.ಏಡ್ಸ್ ಕುರಿತು ನಿಯಂತ್ರಣ ಮಾಡುವಲ್ಲಿ ಯುವ ಜನತೆಯ ಪಾತ್ರ ಬಹಳ ಮುಖ್ಯ ಎಂದು ತಿಳಿಸಿದರು ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಎಚ್.ಐ.ವಿ. ಸೋಂಕಿತರಿಗೆ ದೊರೆಯುವ ಸೇವಾ ಸೌಲಭ್ಯಗಳು ಹಾಗೂ 2017ರ ಎಚ್.ಐ.ವಿ. ಏಡ್ಸ್ ನಿಯಂತ್ರಣ ಕಾಯ್ದೆ ಹಾಗೂ ಅವರಿಗಿರುವ ಸಾಮಾಜಿಕ ಸೌಲತ್ತುಗಳು ಬಗ್ಗೆ ಸಂಪೂರ್ಣ ಉಪನ್ಯಾಸ ನೀಡಿದರು.

ತಾಲೂಕಾ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ ಎಚ್.ಐ.ವಿ.ಏಡ್ಸ್ ತಾನಾಗಿ ಬರೋದಿಲ್ಲ ನಾವಾಗೇ ತೆಗೆದುಕೊಂಡರೆ ಮಾತ್ರ ಬರುವುದು ಎಂದು ಏಡ್ಸ್ ಅರಿವು ಬಗ್ಗೆ ಮಾತನಾಡಿದರು.

ತಾಲೂಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ, ರೇವಣಸಿದ್ದಪ್ಪ ಬಿ ಹೆಚ್ ಇವರು ವಿಶ್ವ ಏಡ್ಸ ದಿನಾಚರಣೆ ಹಾಗೂ ಸಮುದಾಯಗಳು ಮುನ್ನಡೆಸಲಿ ಎಂಬ ಘೋಷವಾಕ್ಯವನ್ನು ವಿವರಿಸಿದರು. ವೇದಿಕೆಯಲ್ಲಿ ಪ್ರಧಾನ ದಿವಾಣಿ ನ್ಯಾಯಾಧೀಶ ಸಂಜುಕುಮಾರ್ ಪಾಶ್ಚಾಪೂರ, ಆಯುರ್ವೇದ ಕಾಲೇಜಿನ ಉಪನ್ಯಾಸಕರು ಹಾಜರಿದ್ದರು.

ದಂತ ವೈದ್ಯ ಡಾ. ಜಯಂತ, ಶ್ರೀ ವೀರಪುಲಿಕೇಶಿ ಹಾಗೂ ಶ್ರೀ ಕಾಳಿದಾಸ ಆಯುರ್ವೇದ ಕಾಲೇಜ್ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು. ನಿರ್ಮಲಾ ಬಳಿಗಾರ ಪ್ರಾರ್ಥಿಸಿದರು, ರಾಜು ಅಂಬಿಗೇರ ನಿರೂಪಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಏಡ್ಸ್ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಜಾಥಾವು ಸರ್ಕಾರಿ ಆಸ್ಪತ್ರೆ ಆವರಣದಿಂದ ಬಸ್ ನಿಲ್ದಾಣ, ಬಸವೇಶ್ವರ ಸರ್ಕಲ್, ರಾಮದುರ್ಗ ಸರ್ಕಲ್ ವರೆಗೆ ಜಾಗೃತಿ ಮೂಡಿಸಲಾಯಿತು. ತಾಲೂಕ ಆರೋಗ್ಯ ಅಧಿಕಾರಿ ಡಾ.ಎಂ.ಬಿ.ಪಾಟೀಲ, ಡಾ.ವೈ.ಜೆ.ಮನಿಯಾರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ಎಚ್.ಮಹಾಲಿಂಗಪೂರ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ಕಾಳಿದಾಸ ಆಯುರ್ವೇದ ಮೆಡಿಕಲ್ ಕಾಲೇಜ್ ಹಾಗೂ ಶ್ರೀ ವೀರಪುಲಿಕೇಶಿ ಆಯುರ್ವೇದ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಏಡ್ಸ್ ರೋಗದ ವಿರುದ್ಧ ಘೋಷಣೆ ಕೂಗುತ್ತ ಪ್ರಚಾರ ಮಾಡಿದರು.

# ಈ ಗ್ರಾಮದ ತುಂಬೆಲ್ಲಾ ಜಾನಪದ ಕಲಾವಿದರು

ರಬಕವಿ-ಬನಹಟ್ಟಿ : ಇಂದಿನ ಪ್ಯಾಷನ್ ಯುಗದಲ್ಲಿ ಜಾನಪದ ಕಲೆಯು ಕ್ರಮೇಣ ನಶಿಸುತ್ತಿದೆ ಎಂಬ ಆತಂಕ ಎದುರಾಗುತ್ತಿರುವ ಸಂದರ್ಭದಲ್ಲಿ ಈ ಗ್ರಾಮವು ಅದಕ್ಕೆ ಸೆಡ್ಡು ಹೊಡೆಯುವ ರೀತಿಯಲ್ಲಿ ಕಲಾವಿದರನ್ನು ತಯಾರು ಮಾಡಿದೆ. ಅದುವೇ ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ನಾವಲಗಿ ಗ್ರಾಮ. ನಾವಲಗಿ ಅಂದಾಕ್ಷಣ ಮೊದಲು ನೆನಪಿಗೆ ಬರುವುದು ಇಲ್ಲಿಯ ಕಲೆ ಹಾಗೂ ಕಲಾವಿದರು.

ಈ ಗ್ರಾಮವು ಮುಧೋಳದಿಂದ 18 ಕಿಮೀ.ಜಮಖಂಡಿಯಿಂದ 16 ಕಿಮೀ.ಹಾಗೂ ಬನಹಟ್ಟಿಯಿಂದ 6 ಕಿಮೀ ಹೀಗೆ ತ್ರಿಕೋನ ಮಧ್ಯದಲ್ಲಿ ರಾರಾಜಿಸುತ್ತಿರುವುದೆ ನಾವಲಗಿ ಗ್ರಾಮ.ಈ ಗ್ರಾಮವು ಕನ್ನಡ ನಾಡಿನ ಸಾಂಸ್ಕೃತಿಕ ಲೋಕಕ್ಕೆ ತನ್ನದೆಯಾದ ಕೊಡುಗೆಯನ್ನು ನೀಡುತ್ತಾ ಬರುತ್ತಿರುವುದು ಹೆಮ್ಮೆಯ ವಿಷಯ ಈ ಗ್ರಾಮವು ಕಲಾ ಸಂಸ್ಕೃತಿಯ ತವರೂರು ಎಂದೇ ಖ್ಯಾತಿ ಪಡೆಯುವ ಮೂಲಕ ಹೆಸರು ಪಡೆದಿದೆ.ಈ ಗ್ರಾಮದಲ್ಲಿ ಜಾನಪದ ಕಲೆಯ ಎಲ್ಲ ಪ್ರಕಾರದ ಕಲಾವಿದರು ಕಾಣಸಿಗುತ್ತಾರೆ.ಜಾನಪದ ಕಲೆಯ ಕರಡಿ ಮಜಲು. ಸಂಬಾಳ. ಖಿನಿ. ಬಯಲಾಟಗಳಾದ ಶ್ರೀ ಕೃಷ್ಣ ಪಾರಿಜಾತ. ಸಂಗ್ಯಾ ಬಾಳ್ಯಾ. ಸೋಬಾನ ಪದ.ಹಂತಿ ಪದ ಭಜನೆ ಹಾಗೂ ಇನ್ನಿತರ ಜಾನಪದ ಕಲಾವಿದರನ್ನು ಗ್ರಾಮದ ತುಂಬೆಲ್ಲಾ ನೋಡಬಹುದು.

ಈ ಗ್ರಾಮದಲ್ಲಿ ಮನೆ ಮನೆಗೂ ಕಲಾವಿದರು ಇರುವುದು ಬಹಳ ಅಚ್ಚರಿಯ ವಿಷಯ.ಹೌದು ಈ ಗ್ರಾಮದ ಕಲಾವಿದರು ಹಳ್ಳಿಯಿಂದ ದಿಲ್ಲಿಯ ವರೆಗೂ ಹೋಗಿ ತಮ್ಮ ಕಲಾ ಪ್ರದರ್ಶನ ಮಾಡಿ ಶಹಬ್ಬಾಷ್ ಎನಿಸಿಕೊಂಡಿರುವುದು ಪ್ರಸಿದ್ಧಿ ಪಡೆದಿದೆ.

ಇಲ್ಲಿಯ ಕಲಾವಿದರು ರಾಜ್ಯ ಹಾಗೂ ರಾಷ್ಟ್ರವಮಟ್ಟದಲ್ಲಿನ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ತಮ್ಮ ಕಲಾ ಸೇವೆಯನ್ನು ಮಾಡುತ್ತಿದ್ದಾರೆ ಅಂತೆಯೇ ಈ ಗ್ರಾಮದ ಅನೇಕ ಕಲಾವಿದರಿಗೆ ಜಿಲ್ಲಾ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.ಇದು ಗ್ರಾಮದ ಒಂದು ಕೀರ್ತಿ ಹೆಚ್ಚಿಸಿದೆ.ಇದರ ಜೊತೆಗೆ ರಂಗಭೂಮಿ ಕಲೆಗೂ ಈ ಗ್ರಾಮ ಕಡಿಮೆ ಏನಿಲ್ಲ ರಂಗಭೂಮಿಯಲ್ಲಿಯೂ ತನ್ನದೆಯಾದ ಛಾಪು ಮೂಡಿಸುವ ಮೂಲಕ ಹೆಸರು ಗಳಿಸಿದೆ.

ಅದೇ ರೀತಿ ಈ ಗ್ರಾಮವು ಕ್ರೀಡಾ ಕ್ಷೇತ್ರದಲ್ಲಿ ಏನೂ ಹಿಂದೆ ಬಿದ್ದಿಲ್ಲ ಕ್ರೀಡೆಯಲ್ಲಿಯೂ ಕೀರ್ತಿ ಪತಾಕೆಯನ್ನು ಹಾರಿಸುವ ಮೂಲಕ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂಬುದು ಮತ್ತೊಂದು ಹೆಮ್ಮೆಯ ಸಂಗತಿ.ಇಂತಹ ವಿಶೇಷ ಸಂಸ್ಕೃತಿಕಯುಳ್ಳ ಕಲಾ ಗ್ರಾಮದಲ್ಲಿ ಶ್ರೀ ಮಾರುತೇಶ್ವರನ ಭವ್ಯ ದೇವಸ್ಥಾನ ನೋಡುಗರನ್ನು ಕೈಬೀಸಿ ಕರೆಯುತ್ತಿದೆ.ಸರ್ವಧರ್ಮ ಸಮನ್ವಯದ ನೆಲೆ ಈ ಗ್ರಾಮದ ಕಲೆ ಎಂದು ಹೇಳಬಹುದು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS,** Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State